ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 19-12-2026ರ ಶುಕ್ರವಾರ ಬೆಳಗ್ಗೆ 10-30 ರಿಂದ 1.30 ಗಂಟೆವರೆಗೆ ನಡೆದ "ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆ"ಯ ನಡಾವಳಿ.**

**<u>ಉಪಸ್ಥಿತರು:</u>**

1. ಪ್ರೊ. ಎನ್.ಕೆ. ಲೋಕನಾಥ್, ಕುಲಪತಿಗಳು - ಅಧ್ಯಕ್ಷರು
2. ಪ್ರೊ. ಎಸ್.ಜಿ. ಮಂಜುನಾಥ್ - ಸದಸ್ಯರು
3. ಡಾ. ಟಿ.ಆರ್. ಚಂದ್ರಶೇಖರ್ - ಸದಸ್ಯರು
4. ಶ್ರೀ ಕೆ. ಗೋಕುಲ್ ಗೋವರ್ಧನ್ - ಸದಸ್ಯರು
5. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀಮತಿ ಡಿ.ಎಸ್.ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. - ಸದಸ್ಯರು
6. ಡಾ. ಮಹೇಶ್ ಟಿ.ಬಿ. - ಸದಸ್ಯರು
7. ಡಾ. ಹೆಚ್.ಎಂ. ಮಹೇಶ - ಸದಸ್ಯರು
8. ಶ್ರೀ ಮಹದೇಶು - ಸದಸ್ಯರು
9. ಶ್ರೀ ನಾಗರಾಜು ಸಿ. - ಸದಸ್ಯರು
10. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ - ಸದಸ್ಯರು
11. ಡಾ. ಶಿಲ್ಪ ಜೆ. - ಸದಸ್ಯರು
12. ಡಾ. ನಟರಾಜು ಹೆಚ್.ಎಸ್. - ಸದಸ್ಯರು
13. ಶ್ರೀ ಎಂ. ಶಂಕರ - ಸದಸ್ಯರು
14. ಡಾ. ಎಂ. ಪುಷ್ಪವತಿ - ಸದಸ್ಯರು
15. ಡಾ. ಎನ್. ನಾಗರಾಜ, ಕುಲಸಚಿವರು (ಪರೀಕ್ಷಾಂಗ) - ಸದಸ್ಯರು
16. ಶ್ರೀಮತಿ ರೇಖಾ ಕೆ.ಎಸ್., ಹಣಕಾಸು ಅಧಿಕಾರಿಗಳು - ವಿಶೇಷ ಆಹ್ವಾನಿತರು
17. ಶ್ರೀಮತಿ ಸವಿತಾ ಎಂ.ಕೆ., ಕುಲಸಚಿವರು - ಸದಸ್ಯ ಕಾರ್ಯದರ್ಶಿ

**<u>ಅನುಪಸ್ಥಿತರು</u>**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಶ್ರೀ ಶೇಖರ್, ಜಂಟಿ ನಿರ್ದೇಶಕರು, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು, ಸಿಂಡಿಕೇಟ್ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಗೌರವಾನ್ವಿತ ಎಲ್ಲಾ ಸಿಂಡಿಕೇಟ್ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಎಸ್.ಎನ್.ಹೆಗಡೆ, ವಿಶ್ರಾಂತ ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 17-12-2025ರಂದು ನಿಧನ ಹೊಂದಿರುತ್ತಾರೆ. ಇವರು ಮೂಲತಃ ಮಂಗಳೂರಿನವರು, ಮಂಗಳೂರಿನ ವಿಶ್ವವಿದ್ಯಾನಿಲಯದ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ. ತದನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎರಡು ಬಾರಿ ಕುಲಪತಿಗಳಾಗಿ ಸೇವೆ ಸಲ್ಲಿಸಿರುತ್ತಾರೆ, ಇವರು ಕುಲಪತಿಗಳಾಗಿದ್ದ ಸಂದರ್ಭದಲ್ಲಿ ಅನೇಕ ಉತ್ತಮವಾದ ಕೆಲಸಗಳಾಗಿವೆ, ಅನೇಕ ಗೌರವಾರ್ಥ ಹುದ್ದೆಗಳನ್ನು ಅಲಂಕರಿಸಿರುತ್ತಾರೆ. ಶೈಕ್ಷಣಿಕವಾಗಿ ಹೆಚ್ಚು ಜ್ಞಾನ ಹೊಂದಿರುವವರು, ಇವರನ್ನು ಇಂದು ಅಗಲಿರುತ್ತೇವೆ ಎಂದು ತಿಳಿಸುತ್ತಾ, ಮೃತರ ಗೌರವಾರ್ಥ ಎರಡು ನಿಮಿಷ ಮೌನಾಚರಿಸಲಾಯಿತು.

ಪ್ರಸ್ತುತ ವಿಶ್ವವಿದ್ಯಾನಿಲಯದ ಕೆಲವು ಸಿಂಡಿಕೇಟ್ ಸದಸ್ಯರುಗಳು ವಿಶ್ವವಿದ್ಯಾನಿಲಯದ ನಿಯಮವನ್ನು ಉಲ್ಲಂಘಿಸುತ್ತಿರುವುದು ಗಮನಿಸಿರುತ್ತೇನೆ, ಕೆಲವು ವಿಭಾಗಗಳಲ್ಲಿ ಅಧ್ಯಾಪಕರುಗಳು ತರಗತಿ ತೆಗೆದುಕೊಳ್ಳದಿರುವುದನ್ನು ಸಹ ಗಮನಿಸಲಾಗಿದ್ದು, ಮಹಿಳಾ ಅಧ್ಯಯನ ವಿಭಾಗದಲ್ಲಿ ವಿದ್ಯಾರ್ಥಿಗಳೇ ಇಲ್ಲ, ಆದರೆ ಅತಿಥಿ ಉಪನ್ಯಾಸಕರು ಹಾಜರಿರುತ್ತಾರೆ, ಅಧ್ಯಾಪಕೇತರರು ಅಧ್ಯಕ್ಷರ ಗಮನಕ್ಕೆ ಬಾರದೆ ಗೈರುಹಾಜರಾಗುವುದು, ವಿದ್ಯಾರ್ಥಿಗಳು ಸಮಸ್ಯೆಗಳನ್ನು ವಿಶ್ವವಿದ್ಯಾನಿಲಯದ ಗಮನಕ್ಕೆ ತರದೆ ಮಾಧ್ಯಮಕ್ಕೆ ಮಾಹಿತಿ ನೀಡುತ್ತಿರುವುದು ಜೊತೆಗೆ ಪ್ರಾಧ್ಯಾಪಕರೊಬ್ಬರು ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೆ ವಿದೇಶಕ್ಕೆ ತೆರಳಿರುವುದು ಸಹ ಗಮನಕ್ಕೆ ಬಂದಿದೆ.

ಮುಂದುವರೆದು, ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರು ಗೌಪ್ಯವಾಗಿಡಬೇಕಾದ ವಿಷಯವನ್ನು ಮಾಧ್ಯಮಕ್ಕೆ ತಿಳಿಸುತ್ತಿದ್ದಾರೆ, ವಿಶ್ವವಿದ್ಯಾನಿಲಯವು ಗೌಪ್ಯವಾಗಿಡಬೇಕಾದಂತಹ ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ನಿರ್ಣಯವನ್ನು ತೆಗೆದುಕೊಂಡರೆ ಮಾಧ್ಯಮದಲ್ಲಿ ಬಿತ್ತರಗೊಳ್ಳುತ್ತಿದೆ. ಸಿಂಡಿಕೇಟ್ ಸದಸ್ಯರುಗಳಾದ ತಾವುಗಳು ಸಭೆಯಲ್ಲಿ ವಿಶ್ವವಿದ್ಯಾನಿಲಯದ ಪಿಂಚಣಿದಾರರಿಗೆ ಪಿಂಚಣಿ ದೊರಕದೆ ಇರುವುದರ ಬಗ್ಗೆ, ಶೈಕ್ಷಣಿಕವಾಗಿಯೂ ಯಾವುದೇ ವಿಷಯವೂ ಸಹ ಚರ್ಚೆಯಾಗುತ್ತಿಲ್ಲ, ಜೊತೆಗೆ ಎಸ್‌ಸಿ/ಎಸ್‌ಟಿ 65 ವಿದ್ಯಾರ್ಥಿಗಳು ಶಿಷ್ಯವೇತನ ತೆಗೆದುಕೊಂಡು Ph.D., Submission ಮಾಡದೆ ಹೋಗಿರುತ್ತಾರೆ. ಆದರೆ ಇವುಗಳೆಲ್ಲದರ ಬಗ್ಗೆ ಚರ್ಚೆಯಿರುವುದಿಲ್ಲ, ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಕುಲಪತಿಗಳಿಗೆ ಕೆಲವು ಮಾಧ್ಯಮದವರು ತನ್ನದಲ್ಲದ ವಿಷಯದ ಕುರಿತು ವಿರುದ್ಧನಿಯಲ್ಲಿ ಮಾತನಾಡುತ್ತಿದ್ದಾರೆ, ಟೆಂಡರ್‌ಗಳನ್ನು ಆಹ್ವಾನಿಸಿರುವುದಕ್ಕೆ ಸಾಕಷ್ಟು ತೊಂದರೆಗಳು ಎದುರಾಗುತ್ತಿದೆ, ಟೆಂಡರ್ ಆಹ್ವಾನಿಸಿದರೆ ವಿರೋಧ ವ್ಯಕ್ತಪಡಿಸಿ ಲೋಕಾಯುಕ್ತಕ್ಕೆ ದೂರು ನೀಡಿರುತ್ತಾರೆ ಅಥವಾ ಸಿಂಡಿಕೇಟ್ ಸಭೆಯೇ ಕಾರಣ ಎಂದು ತಿಳಿಸಿರುತ್ತಾರೆ. ಇಂತಹ ಅನೇಕ ಸಮಸ್ಯೆಗಳು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿದೆ. ಇಂತಹ ಪ್ರಸಂಗಗಳು ಪದೇ ಪದೇ ನಡೆಯುತ್ತಿದ್ದರೆ ವಿಶ್ವವಿದ್ಯಾನಿಲಯ ಹೇಗೆ ಬೆಳೆಯುವುದಕ್ಕೆ ಸಾಧ್ಯ? ಕುಲಪತಿಯಾಗಿ ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದೇನೆ ಕಳೆದೆರಡು ಸಿಂಡಿಕೇಟ್ ಸಭೆಯಿಂದ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದರು.

ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು, ಅಧ್ಯಾಪಕೇತರರು ವಿಶ್ವವಿದ್ಯಾನಿಲಯದ ನಿಯಮ ಮೀರಿ ನಡೆದುಕೊಂಡಲ್ಲಿ ಮುಲಾಜಿಲ್ಲದೆ ಶಿಸ್ತು ಕ್ರಮ ಕೈಗೊಳ್ಳುತ್ತೇನೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಪೂರ್ವಾನುಮತಿ ಪಡೆಯದೆ ವಿದೇಶಕ್ಕೆ ತೆರಳಿರುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು, ಸಿಂಡಿಕೇಟ್ ಸಭೆಯಲ್ಲಿ ಕಾರ್ಯಸೂಚಿಗೆ ಸಂಬಂಧಿಸಿದ ವಿಷಯಗಳಿಗೆ ಮಾತ್ರ ಚರ್ಚಿಸುವುದು ಸೂಕ್ತ ಎಂದು ತಿಳಿಸಿದರು.

ತದನಂತರ 2025-26ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ 106ನೇ ಘಟಿಕೋತ್ಸವವನ್ನು ದಿನಾಂಕ : 05-01-2026ರಂದು ಬೆಳಗ್ಗೆ 11.30 ಗಂಟೆಗೆ ನಡೆಯಲಿದ್ದು, ಇಸ್ರೋದ ಮಾಜಿ ಅಧ್ಯಕ್ಷರಾದ ಡಾ. ಸೋಮನಾಥ್‌ರವರು ಸದರಿ ಘಟಿಕೋತ್ಸವದ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ಸಭೆಯ ಗಮನಕ್ಕೆ ತಂದರು.

ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಹಾಗೂ ಇತರೆ ಸಂಸ್ಥೆಗಳೊಂದಿಗೆ ದಿನಾಂಕ : 11-01-2026ರ ರಂದು "ಫಿಟ್ ಮೈಸೂರು" ಎಂಬ ಜಾಗೃತ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅಂದು ಬೆಳಗ್ಗೆ 6.30 ಗಂಟೆಗೆ ಮಾನಸಗಂಗೋತ್ರಿಯ ಆವರಣದಲ್ಲಿರುವ ಬಯಲು ರಂಗಮಂದಿರದಿಂದ ಕಾರ್ಯಕ್ರಮವು ಪ್ರಾರಂಭವಾಗುತ್ತದೆ. ಸದರಿ ಕಾರ್ಯಕ್ರಮದಲ್ಲಿ ಸುಮಾರು ಹತ್ತು ಸಾವಿರದಿಂದ-ಹದಿನೈದು ಸಾವಿರ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಈ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳು ಹಾಗೂ ಗಣ್ಯರುಗಳು ಒಟ್ಟುಗೂಡಿ ವಾಕಥಾನ್‌ಗೆ ಭಾಗವಹಿಸಬೇಕು. ವಾಕಥಾನ್ ಬಯಲು ರಂಗಮಂದಿರದಿಂದ ಪ್ರಾರಂಭವಾಗಿ ಸೆನೆಟ್ ಭವನದಲ್ಲಿ ಅಂತ್ಯವಾಗುತ್ತದೆ. ಇದರ ಉದ್ದೇಶ ಭಾರತದ **"ವಂದೇ ಮಾತರಂ"** ಗೀತೆಗೆ 150 ವರ್ಷಗಳು ತುಂಬಿರುವುದು. ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲಾ ವಿದ್ಯಾರ್ಥಿಗಳಿಗೆ ತಿಂಡಿಯ ವ್ಯವಸ್ಥೆಯನ್ನು ಸಹ ಮಾಡಲಾಗುವುದು. "ಫಿಟ್ ಮೈಸೂರು" ಕಾರ್ಯಕ್ರಮಕ್ಕೆ ಸಿಂಡಿಕೇಟ್ ಸದಸ್ಯರಾದ ತಾವುಗಳೆಲ್ಲರೂ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಸಿಂಡಿಕೇಟ್ ನಿಯಮದಂತೆ ಎಂಟನೇ ಸಾಮಾನ್ಯ ಸಭೆಯಲ್ಲಿ ಹಿಂದಿನ ಸಭೆಯ ಅಂದರೆ ಏಳನೇ ಸಾಮಾನ್ಯ ಸಭೆಯ ತೆಗೆದುಕೊಂಡ ಕ್ರಮಗಳ ವರದಿಯನ್ನು ಸಭೆಯಲ್ಲಿ ನೀಡಲಾಗುತ್ತಿತ್ತು. ಆದರೆ ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸಹ ನೀಡಿರುವುದಿಲ್ಲ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್‌ಗೋವರ್ಧನ್‌ರವರು ಮಾತನಾಡಿ, ಕಳೆದ ಸಭೆಯ ನಡಾವಳಿ ಇಲ್ಲಿಯವರೆಗೂ ತಲುಪಿರುವುದಿಲ್ಲ, ಕೊನೆಪಕ್ಷ ಈ ಸಭೆಯಲ್ಲಾದರೂ ನೀಡಿದರೆ ಸೂಕ್ತ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕಳೆದ ಸಭೆಯ ನಡಾವಳಿ ನೀಡುವ ವ್ಯವಸ್ಥೆ ಮಾಡಲಾಗಿದ್ದು, ನಡಾವಳಿಯನ್ನು ಪರಿಶೀಲಿಸಬಹುದೆಂದು ತಿಳಿಸಿದರು. ಏಳನೇ ಸಾಮಾನ್ಯ ಸಿಂಡಿಕೇಟ್ ಸಭೆ ನಡಾವಳಿಯಲ್ಲಿ ದೈಹಿಕ ಶಿಕ್ಷಣ ವಿಭಾಗದ ಅಧ್ಯಕ್ಷರು ಮತ್ತು ನಿರ್ದೇಶಕರ ಬದಲಾವಣೆ ಮತ್ತು ಮಾಹಿತಿ ಸಂವಹನ ವಿಭಾಗದ (ಐಸಿಡಿ) ನಿರ್ದೇಶಕರ ಅಮಾನತು ಕುರಿತು ತಿದ್ದುಪಡಿ ಮಾಡಬೇಕಾಗಿತ್ತು. ಕುಲಸಚಿವರು ಸಹ ಕೆಲವೊಂದು ಕಾರ್ಯಕ್ರಮಗಳಲ್ಲಿ ಕಾರ್ಯನಿರತರಾಗಿದ್ದರು, ಘಟಿಕೋತ್ಸವ ಸಂಬಂಧ ಕೆಲಸಗಳಿದ್ದ ಕಾರಣ ಸಭೆಯ ನಡಾವಳಿಯು ಸದಸ್ಯರ ಕೈಸೇರಿರುವುದಿಲ್ಲ ಎಂದು ತಿಳಿಸಿದರು. ಪ್ರಾಧ್ಯಾಪಕರೊಬ್ಬರು ವಿಶ್ವವಿದ್ಯಾನಿಲಯದಲ್ಲಿ ಪೂರ್ವಾನುಮತಿ ಪಡೆಯದೆ ವಿದೇಶಕ್ಕೆ ತೆರಳಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

ಶ್ರೀ ಕೆ. ಗೋಕುಲ್‌ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೆ ವಿದೇಶಕ್ಕೆ ತೆರಳಿರುವವರ ವಿರುದ್ಧ ನಿಯಮಾನುಸಾರ ವಿಶ್ವವಿದ್ಯಾನಿಲಯವು ಕ್ರಮಕೈಗೊಳ್ಳಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ವಿರುದ್ಧ ಯಾರೇ ತಪ್ಪೆಸಗಿದರು ಅವರ ವಿರುದ್ಧ ಶಿಸ್ತು ಕ್ರಮಕೈಗೊಳ್ಳುವುದು ನಿಶ್ಚಿತ ಎಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಗೆ ಭೇಟಿ ನೀಡುತ್ತಿದ್ದೇನೆ, ವಿಭಾಗಗಳಲ್ಲಿ ನಿಯಮ ಮೀರಿದ ಅಧ್ಯಕ್ಷರು, ಅಧ್ಯಾಪಕರು ಮತ್ತು ಅಧ್ಯಾಪಕೇತರರಿಗೆ ಎಚ್ಚರಿಕೆ ಸಹ ನೀಡುತ್ತಿರುವುದಾಗಿ ತಿಳಿಸಿದರು.

ಮುಂದುವರೆದು, ವಿಶ್ವವಿದ್ಯಾನಿಲಯದ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಎಂ.ಎಡ್ ವಿದ್ಯಾರ್ಥಿಯೊಬ್ಬರು ಪದವಿ ಪೂರ್ವಕಾಲೇಜಿನಲ್ಲಿ ಉದ್ಯೋಗಿಯಾಗಿ ಕೆಲಸ ನಿರ್ವಹಿಸುತ್ತಿದ್ದು, ಸದರಿಯವರಿಗೆ ಪೂರ್ಣ ಪ್ರಮಾಣದ ಹಾಜರಾತಿಯನ್ನು ನೀಡಿ ಪರೀಕ್ಷೆಯನ್ನು ಬರೆಸಿರುತ್ತಾರೆ ಎಂಬ ವಿಷಯವು ಬೆಳಕಿಗೆ ಬಂದಿದೆ. ಇಂತಹ ಪ್ರಸಂಗಗಳು ಕಂಡುಬರುತ್ತಿರುವುದರಿಂದ ಇವರ ವಿರುದ್ಧವೂ ಸಹ ನಿಯಾಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯದ ವಿರುದ್ಧವಿರುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಲಾಗುವುದು, ಅವರು ಯಾವುದೇ ಹುದ್ದೆಯಲ್ಲಿದ್ದರೂ ಸಹ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮನು ಎಂಬ ವ್ಯಕ್ತಿ ವಿಶ್ವವಿದ್ಯಾನಿಲಯಕ್ಕೂ ಅವನಿಗೂ ಯಾವುದೆ ಸಂಬಂಧವಿಲ್ಲದಿದ್ದರೂ ಅವರು ತಮ್ಮ ವಾಟ್ಸಫ್‌ನಲ್ಲಿ ವಿಶ್ವವಿದ್ಯಾನಿಲಯದ ಪತ್ರಗಳನ್ನು ಹಾಕುತ್ತಿರುತ್ತಾರೆ ಎಂಬುದು ತಿಳಿದು ಬಂದಿರುವುದರಿಂದ, ನಾವು ಆರು ಜನ ಸಿಂಡಿಕೇಟ್ ಸದಸ್ಯರು ಮನು ಎಂಬ ವ್ಯಕ್ತಿ ಮೇಲೆ ಕ್ರಮಕೈಗೊಳ್ಳುತ್ತೇವೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರಸ್ತುತ ಕುಲಪತಿಗಳ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲು ಮಾಡುತ್ತಾರೆ. ಟೆಂಡರ್ ಮುಗಿದಿಯದಿದ್ದರೂ ಆಗಲೇ ಪ್ರಕರಣ ದಾಖಲು ಮಾಡಲು ಹೋಗಿರುತ್ತಾರೆ, ಇಂತಹ ಅನೇಕ ಅನಾವಶ್ಯಕ ಪ್ರಕರಣವನ್ನು ನಾವು ಪರಿಗಣಿಸುವುದಿಲ್ಲ. ಸುದ್ಧಿ ಟಿವಿ ವರದಿಗಾರ ತನ್ನದಲ್ಲದ ವಿಷಯವನ್ನು ತೆಗೆದುಕೊಂಡು ಬಂದು ನನ್ನ ಬಳಿ ಚರ್ಚಿಸುವುದಕ್ಕೆ ಪ್ರಯತ್ನಿಸಿರುತ್ತಾರೆ, ಅವರಿಗೆ ಸಂಬಂಧವಿಲ್ಲದ ವಿಷಯವನ್ನು ಕೇಳುವ ಹಕ್ಕು ನಿಮಗಿರುವುದಿಲ್ಲ ಎಂದು ತಿಳಿಸಿ ಕಳುಹಿಸಿರುತ್ತೇನೆ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸುದ್ಧಿ ಟಿವಿ ವರದಿಗಾರನ ವಿರುದ್ಧ ಪ್ರಕರಣವನ್ನು ದಾಖಲು ಮಾಡಿರುತ್ತೇವೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸುದ್ಧಿ ಟಿವಿ ವರದಿಗಾರನ ವಿರುದ್ಧ ವಿಶ್ವವಿದ್ಯಾನಿಲಯದಿಂದ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಮತ್ತು ಸುದ್ಧಿ ಟಿವಿಯ ಆರ್‌ಟಿಐ ಕಾರ್ಯಕರ್ತ ಅರವಿಂದ್ ಶರ್ಮರವರು ಸಹ ವಿಶ್ವವಿದ್ಯಾನಿಲಯದ ವಿರುದ್ಧ ಮಾತನಾಡಿರುತ್ತಾರೆ ಅವರ ವಿರುದ್ಧ ಸಹ ಶಿಸ್ತು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ನಾನು ಸಹ ಸುದ್ಧಿ ಟಿವಿಯಲ್ಲಿ ಪ್ರಸಾರವಾದ ಸುದ್ಧಿಯನ್ನು ಗಮನಿಸಿರುತ್ತೇನೆ, ಅವರು ವಿಶ್ವವಿದ್ಯಾನಿಲಯದ ವಿರುದ್ಧ ತುಚ್ಛವಾಗಿ ಮಾತನಾಡಿರುತ್ತಾನೆ. ಸಿಂಡಿಕೇಟ್ ಸಭೆಯಲ್ಲಿ ಏನು ಚರ್ಚೆಯಾಗುತ್ತದೆ ಅದು ಯಥಾವತ್ತಾಗಿ ಮಾತನಾಡುತ್ತಾನೆ. ಸಿಂಡಿಕೇಟ್ ಸಭೆಯಲ್ಲಿ ನಡೆಯುವ ವಿಷಯ ನಮ್ಮಲ್ಲಿಯೇ ಒಬ್ಬ ಸಿಂಡಿಕೇಟ್ ಸದಸ್ಯರು ಅರವಿಂದ್ ಶರ್ಮರವರಿಗೆ ನೀಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಕಳೆದ ಸಭೆಯಲ್ಲಿ ದೈಹಿಕ ಶಿಕ್ಷಣ ವಿಭಾಗದಲ್ಲಿರುವ ಇಬ್ಬರು ಪ್ರಾಧ್ಯಾಪಕರ ಮಧ್ಯೆ ಸಮಸ್ಯೆ ಉಂಟಾಗಿ ಇಬ್ಬರಿಗೂ ಯಾವುದೇ ಅಧ್ಯಕ್ಷ/ನಿರ್ದೇಶಕರ ಹುದ್ದೆಯನ್ನು ನೀಡದಿರುವುದಾಗಿ ತೀರ್ಮಾನಿಸಲಾಗಿರುತ್ತದೆ. ರವಿ, ತಾತ್ಕಾಲಿಕ ದೈಹಿಕ ಶಿಕ್ಷಕರು ಇವರು ಅಧ್ಯಕ್ಷ/ನಿರ್ದೇಶಕರ ಹುದ್ದೆಯಿಂದ ಹೇಗೆ ತೆಗೆಸಿದ್ದೇನೆ ಎಂದು ವ್ಯಂಗ್ಯವಾಗಿ ಮಾತನಾಡಿರುತ್ತಾನೆ ಎಂದು ತಿಳಿಸುತ್ತಾ, ದೈಹಿಕ ಶಿಕ್ಷಣದ ಹಿರಿಯ ತರಬೇತಿದಾರರಾದ ಶ್ರೀ ಪ್ರಭಾಕರ್‌ರವರಿಗೂ ಸಹ ತೊಂದರೆ ನೀಡಿರುತ್ತಾನೆ ಎಂದು ತಿಳಿದು ಬಂದಿದ್ದು, ಇದರ ಹಿಂದೆ ಯಾರೇ ಇದ್ದರೂ ಸಹ ಅವರ ಮೇಲೂ ಸಹ ಕ್ರಮಕೈಗೊಳ್ಳಬೇಕಾಗಿದೆ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ವಿರುದ್ಧ ಧ್ವನಿ ಎತ್ತುವವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳುವುದಕ್ಕೆ ಸಿಂಡಿಕೇಟ್ ಸದಸ್ಯರುಗಳ ಸಮ್ಮತಿ ಇರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಭಾಗದಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಾ ಅಧ್ಯಕ್ಷ ಸ್ಥಾನವನ್ನು ಹೊಂದುವಂತಹ ಹುದ್ದೆಯಾಗಿರುತ್ತದೆ. ಆದ್ದರಿಂದ ಅಧ್ಯಕ್ಷರು/ನಿರ್ದೇಶಕರ ಹುದ್ದೆಯನ್ನು ಇತರರಿಗೆ ವಹಿಸಿ ಇಬ್ಬರು ಪ್ರಾಧ್ಯಾಪಕರು ಕಡ್ಡಾಯವಾಗಿ ವಿಶ್ವವಿದ್ಯಾನಿಲಯವು ಸೂಚಿಸಿದ ಸ್ಥಳದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಎಂಟನೇ ಸಾಮಾನ್ಯ ಸಭೆಯ ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

| | |
|---|---|
| **ಸಾಮಾನ್ಯ ಸಭೆ**<br>**2025/8.1** | ದಿನಾಂಕ : 29-07-2025ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಾಚ್ಯವಿದ್ಯಾ ಸಂಶೋಧನಾಲಯ ಉನ್ನತ ಮಟ್ಟದ ಸಮಿತಿಯ ಮೂರನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| | ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಪ್ರಾಚ್ಯವಿದ್ಯಾ ಸಂಶೋಧನಾಲಯದ ಉನ್ನತ ಮಟ್ಟದ ಸಮಿತಿಗೆ ಸಿಂಡಿಕೇಟ್ ಸಭೆಯ ಸದಸ್ಯರನ್ನು ಸಮಿತಿಯ ಸದಸ್ಯರಾಗಿ ನೇಮಿಸಬೇಕಾಗಿ ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿ ತಾಳೆಗರಿಯನ್ನು ಇತರೆ ಸಂಸ್ಥೆಗೆ ನೀಡಿ ಡಿಜಿಟಲೀಕರಣ ಮಾಡಿಸುವ ಬದಲು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳಿಂದ ಮಾಡಿಸುವುದಕ್ಕೆ ತೊಂದರೆಯಾಗುತ್ತದೆಯೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಸಿಬಂದಿಗಳ ಕೊರತೆಯಿರುವುದರಿಂದ ಹಾಗೂ ಸರ್ಕಾರದಿಂದ ಯಾವುದೇ ರೀತಿಯ ಅನುದಾನವು ದೊರಕುತ್ತಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಶ್ರೀ ನಾಗರಾಜು ಸಿ. ರವರು ಮಾತನಾಡಿ, ತಾಳೆಗರಿಯ ಡಿಜಿಟಲೀಕರಣದಿಂದ ಮೂಲ ವಸ್ತು ಇತರರ ಪಾಲುಗುವುದೆಂಬ ಆತಂಕವನ್ನು ವ್ಯಕ್ತಪಡಿಸಿದರು.<br><br>ಕುಲಸಚಿವ (ಪರೀಕ್ಷಾಂಗ)ವರು ಮಾತನಾಡಿ, ತಾಳೆಗರಿಯ ಡಿಜಿಟಲೀಕರಣದ ಮೂಲ ವಸ್ತು ವಿಶ್ವವಿದ್ಯಾನಿಲಯದಲ್ಲಿಯೇ ಇರುತ್ತದೆ. ಸ್ಕ್ಯಾನ್ ಕಾಪಿಯನ್ನು ಮಾತ್ರ ಅವರು ಮಾರಾಟ ಮಾಡುವ ಅಧಿಕಾರವನ್ನು ನೀಡಲಾಗಿರುತ್ತದೆ ಎಂದು ತಿಳಿಸಿದರು. |

| | |
|---|---|
| | ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕೆಲವು ಡಿಜಿಟಲೀಕರಣ ಮಾಡುವಂತಹ ಎನ್‌ಜಿಓ ಸಂಸ್ಥೆಗಳು ಕೇಂದ್ರ ಸರ್ಕಾರದಲ್ಲಿ ಎನ್‌ಜಿಓ ಎಂದು ತಿಳಿಸಿ, ಅಲ್ಲಿಯ ಸಚಿವಾಲಯದಿಂದ ಅನುದಾನವನ್ನು (Grants) ತೆಗೆದುಕೊಳ್ಳುತ್ತಾರೆ ಎಂಬ ಮಾಹಿತಿ ಇದೆ ಎಂದು ತಿಳಿಸಿದರು. |
| **ತೀರ್ಮಾನ** | **ದಿನಾಂಕ : 29-07-2025ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಪ್ರಾಚ್ಯವಿದ್ಯಾ ಸಂಶೋಧನಾಲಯ ಉನ್ನತ ಮಟ್ಟದ ಸಮಿತಿಯ ಮೂರನೇ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.2** | ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಜ್ಞಾನ ಭಾರತಂ, ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ ಸಂಸ್ಥೆಯೊಂದಿಗೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ, ಮೈಸೂರು ವಿಶ್ವವಿದ್ಯಾನಿಲಯ ಮತ್ತು ಜ್ಞಾನ ಭಾರತಂ, ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ ಸಂಸ್ಥೆಯೊಂದಿಗೆ ಸಭೆ ನಡೆದಿದ್ದು, ಕರ್ನಾಟಕದ ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಹಸ್ತಪ್ರತಿಯನ್ನು ಭಾರತದ ದಕ್ಷಿಣ ವಲಯದ ಹಸ್ತಪ್ರತಿಗಳ ಕೇಂದ್ರವನ್ನಾಗಿ ಸ್ಥಾಪಿಸಲು ಮೈಸೂರು ವಿಶ್ವವಿದ್ಯಾನಿಲಯವು ತೀರ್ಮಾನಿಸಿದ್ದು, ಸದರಿ ವಿಷಯಕ್ಕನುಗುಣವಾಗಿ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಜ್ಞಾನ ಭಾರತಂ, ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳುವ ಅಂಶವನ್ನು ಸಭೆಯಲ್ಲಿ ತಿಳಿಸಿದರು.<br><br>ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಡಿಜಿಟಲೀಕರಣಗೊಳಿಸುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಮೂಲ ಹಸ್ತಪ್ರತಿಗಳಿಗೆ ಹಾನಿ ಮಾಡುವ ಸಾಧ್ಯತೆಗಳು ಇದೆಯೇ ಎಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಮೂಲ ಹಸ್ತಪ್ರತಿಗಳನ್ನು ಈಗಾಲೇ ಡಿಜಿಟಲೀಕರಣ ಮಾಡಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಮೂಲ ಹಸ್ತಪ್ರತಿ ಡಿಜಿಟಲೀಕರಣದಲ್ಲಿ ನಕಲು ಮಾಡಿಕೊಳ್ಳುವ ಸಂಭವ ಇರುವುದಾಗಿ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಹಸ್ತಪ್ರತಿಯನ್ನು ಡಿಜಿಟಲೀಕರಣ ಮಾಡುತ್ತಿರುವ ಮಿಥಿಲ ಸೊಸೈಟಿರವರು ನಕಲು ಮಾಡುವುದಕ್ಕೆ ಅವಕಾಶವಿಲ್ಲದ ಹಾಗೆ ತಂತ್ರಾಂಶ ಸಿದ್ಧಪಡಿಸಿರುತ್ತಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ನಿರ್ದೇಶಕರಾದ ಶ್ರೀ ದೇವರಾಜು ಅವರಿಗೆ ವಿಶ್ವವಿದ್ಯಾನಿಲಯದ ಓಆರ್‌ಐ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದರಿಂದ, ದುರಸ್ತಿ ಮಾಡುವ ಉದ್ದೇಶವಿದ್ದು, ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಆರ್ಥಿಕ ವ್ಯವಸ್ಥೆ ಕುಂಠಿತವಾಗಿರುವುದರಿಂದ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯಿಂದ ಅನುದಾನ ನೀಡುವ ಕುರಿತು ಚರ್ಚಿಸಲಾಗಿರುತ್ತದೆ. |

| | |
|---|---|
| | ಜೊತೆಗೆ ಜಯಲಕ್ಷ್ಮಿ ವಿಲಾಸ ಸಂಗ್ರಹಾಲಯವನ್ನು ನವೀಕರಿಸುವವರಲ್ಲಿ ಚರ್ಚಿಸಿದಾಗ ಅವರು ಸುಮಾರು ರೂ. 20.00 ಲಕ್ಷ ತಗಲುವುದಾಗಿ ತಿಳಿಸಿರುತ್ತಾರೆ. ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯವರು ರೂ. 10.00 ಲಕ್ಷವನ್ನು ಸರ್ಕಾರದ ವತಿಯಿಂದ ನೀಡಲಾಗುವುದು ಎಂದು ತಿಳಿಸಿರುವುದರಿಂದ. ಉಳಿಕೆ ಮೊತ್ತ ರೂ. 10.00 ಲಕ್ಷವನ್ನು ವಿಶ್ವವಿದ್ಯಾನಿಲಯ ಭರಿಸುವುದಾಗಿ ತಿಳಿಸಲಾಗಿದೆ. ದಾನಿಗಳು ಸಹಾಯ ಹಸ್ತವನ್ನು ಚಾಚಿದಲ್ಲಿ ಪೂರ್ಣಪ್ರಮಾಣವಾಗಿ ಓಆರ್ಐ ಕಟ್ಟಡವನ್ನು ನವೀಕರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ವಿಶ್ವಮಾನವ ಕಟ್ಟಡದ ಪಕ್ಕದಲ್ಲಿರುವ ಕಟ್ಟಡಕ್ಕೆ ವಿಶ್ವವಿದ್ಯಾನಿಲಯದಿಂದ ಒಡಂಬಡಿಕೆ ಮಾಡಲಾಗಿರುತ್ತದೆ. ಪ್ರಸ್ತುತ ಒಡಂಬಡಿಕೆಯ ಅವಧಿ ಮುಗಿದಿರುವುದನ್ನು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಕಟ್ಟಡದ ಒಡಂಬಡಿಕೆ ಅವಧಿ ಮುಗಿದಿರುವುದರಿಂದ, ಮುಂದಿನ ಕ್ರಮಕೈಗೊಳ್ಳಲು ಕುಲಸಚಿವರಿಗೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಜಯಲಕ್ಷ್ಮಿ ವಿಲಾಸ ವಸ್ತುಸಂಗ್ರಹಾಲಯವನ್ನು ನವೀಕರಿಸಲಾಗುತ್ತಿದ್ದು, ಪೂರ್ಣಗೊಳ್ಳುವುದಕ್ಕೆ ಸಾಕಷ್ಟು ಸಮಯಾವಕಾಶ ಬೇಕಾಗುತ್ತದೆ ಎಂದು ತಿಳಿಸುತ್ತಾ, ಒಮ್ಮೆ ಸಿಂಡಿಕೇಟ್ ಸದಸ್ಯರುಗಳೆಲ್ಲರೂ ಜಯಲಕ್ಷ್ಮಿ ವಿಲಾಸ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡುವಂತೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಶ್ರೀ ಎಸ್. ರಾಧಕೃಷ್ಣನ್ ರವರ ಹೆಸರಿನಲ್ಲಿರುವ ಕಟ್ಟಡದ ಕುರಿತಾಗಿ ಅವರ ಮಗ ರವರೊಂದಿಗೆ ಚರ್ಚಿಸಲಾಗಿರುತ್ತದೆ. ಶ್ರೀ ಎಸ್. ರಾಧಕೃಷ್ಣರವರ ಮಗ ಕಟ್ಟಡದ ದುರಸ್ತಿ ಕಾರ್ಯ ಮಾಡಿಸುವುದಾಗಿ ತಿಳಿಸಿರುತ್ತಾರೆ ಎಂದು ತಿಳಿಸಿದರು.<br><br>ಡಾ. ಎಂ. ಪುಷ್ಪವತಿರವರು ಮಾತನಾಡಿ, ಡಾ. ಎಸ್. ರಾಧಕೃಷ್ಣನ್ ತತ್ತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರದ ಕಟ್ಟಡದೊಳಗೆ ಡಾ. ಎಸ್. ರಾಧಾಕೃಷ್ಣನ್ ಅವರಿಗೆ ಸಂಬಂಧಿಸಿದ ದಾಖಲೆಗಳು, ಭಾವಚಿತ್ರಗಳು, ಪುಸ್ತಕಗಳು ಸಾಕಷ್ಟು ಇಲ್ಲದಿರುವುದು ಕಂಡುಬಂದಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಎಸ್. ರಾಧಕೃಷ್ಣನ್‌ರವರಿಗೆ ಸಂಬಂಧಿಸಿದ ಸಾಕಷ್ಟು ಭಾವಚಿತ್ರಗಳು ಕಟ್ಟಡದಲ್ಲಿಯೇ ಲಭ್ಯವಿದೆ ಎಂದು ತಿಳಿಸಿದರು. |
| ತೀರ್ಮಾನ | **"ಪ್ರಾಚ್ಯವಿದ್ಯಾ ಸಂಶೋಧನಾಲಯದಲ್ಲಿರುವ ಭಾರತದ ದಕ್ಷಿಣ ವಲಯದ ಹಸ್ತಪ್ರತಿಗಳ ಕೇಂದ್ರ" ವನ್ನು ಮಾಡುವ ಉದ್ಧೇಶದಿಂದ ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು ಜ್ಞಾನ ಭಾರತಂ, ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರ ಇವರುಗಳ ನಡುವೆ ಪರಸ್ಪರ ಒಡಂಬಡಿಕೆ(MoU)ಯನ್ನು ಮಾಡಿಕೊಳ್ಳಲು ಹಾಗೂ ಪುರಾತತ್ವ ಇಲಾಖೆ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಹಯೋಗದೊಂದಿಗೆ ಪ್ರಾಚ್ಯವಿದ್ಯಾ ಸಂಶೋಧನಾಲಯ (ORI) ಕಟ್ಟಡವನ್ನು ನವೀಕರಿಸಲು ಸುಮಾರು ರೂ. 20.00 ಲಕ್ಷಗಳನ್ನು ಅಂದಾಜಿಸಿದ್ದು, ರೂ. 10.00 ಲಕ್ಷಗಳನ್ನು ಪುರಾತತ್ವ ಇಲಾಖೆಯೇ ಭರಿಸುವುದು, ಉಳಿಕೆ ರೂ. 10.00 ಲಕ್ಷಗಳನ್ನು ವಿಶ್ವವಿದ್ಯಾನಿಲಯ ಭರಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |

| | |
|---|---|
| **ಸಾಮಾನ್ಯ ಸಭೆ 2025/8.3** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಸಂಶೋಧನ ಪೀಠ" ಸ್ಥಾಪಿಸುವ ಸಂಬಂಧ ಸಿದ್ಧಪಡಿಸಿರುವ ಕರಡು ಅಧಿನಿಯಮವನ್ನು ಅನುಮೋದಿಸುವ ಬಗ್ಗೆ. |
| | ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಂಶೋಧನಾ ಪೀಠಗಳನ್ನು ಸ್ಥಾಪನೆ ಮಾಡುವಂತಹ ಸಂದರ್ಭದಲ್ಲಿ ಕೆಲವು ಮಾನದಂಡಗಳನ್ನು ರೂಪಿಸಬೇಕು. ಏಕೆಂದರೆ ಒಂದು ಕೋಟಿಗೆ ಬ್ಯಾಂಕ್‌ಗಳಲ್ಲಿ ಶೇ. 4.5 ರಷ್ಟು ಬಡ್ಡಿ ತೀರಾ ಕಡಿಮೆ ಇದ್ದು, ಸದರಿ ಬಡ್ಡಿ ಹಣದಿಂದ ಒಬ್ಬ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವುದಕ್ಕೆ ಸಾಧ್ಯವೇ ಎಂದರು. ಸಂಶೋಧನಾ ಪೀಠ ರಚಿಸುವುದಕ್ಕೆ ಒಂದು ಕೋಟಿಯ ಬದಲು ಐದು ಕೋಟಿ ಹಣವನ್ನು ನೀಡುವುದರ ಕುರಿತು ಶಿಫಾರಸ್ಸು ಪತ್ರ ಬರೆಯುವುದಕ್ಕೆ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯ ಪೀಠಗಳ ಸಭೆಯಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಪೀಠಗಳ ಅನುದಾನವನ್ನು ಪರೀಕ್ಷಿಸಿ ಸರ್ಕಾರಕ್ಕೆ ಪತ್ರ ಬರೆಯುವುದಕ್ಕೆ ಚರ್ಚಿಸಲಾಗಿದೆ, ಊಟ ತಿಂಡಿಗಳಿಗೆ ದುಂದುವೆಚ್ಚ ಮಾಡುವ ಬದಲು ವಿಭಾಗಗಳಲ್ಲಿ ನಡಯುವ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ನೀಡಬೇಕೆಂದು ತಿಳಿಸುತ್ತಾ, ಛಾಯಾಚಿತ್ರಗಳ ಹಾಗೂ ವಿಡಿಯೋಗಳನ್ನು ತೆಗೆಯಲು ಇಎಂಆರ್‌ಸಿಯಲ್ಲಿರುವ ಕ್ಯಾಮರಾಗಳನ್ನು ಬಳಸಬೇಕು. ವಿಶ್ವವಿದ್ಯಾನಿಲಯದಲ್ಲಿರುವ 27 ಪೀಠಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಜೊತೆಗೆ ವರ್ಷದಲ್ಲಿ ಕೈಗೊಂಡ ಕಾರ್ಯಕ್ರಮಗಳ ಮಾಹಿತಿ ನೀಡುವಂತೆ ತಿಳಿಸಲಾಗಿದೆ.<br><br>ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆಲವೊಂದು ಸಂಶೋಧನಾ ಪೀಠಕ್ಕೆ 05 ರಿಂದ 50 ಕೋಟಿವರೆಗೂ ಅನುದಾನ ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಮಹದೇಶುರವರು ಮಾತನಾಡಿ, ಮಾನ್ಯ ಮುಖ್ಯಮಂತ್ರಿಗಳು ಸಹ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರನ್ನು ಗುರುಗಳಾಗಿ ಕಾಣುತ್ತಾರೆ, ಅವರಲ್ಲಿ ಅನುದಾನಕ್ಕೆ ಮನವಿ ಸಲ್ಲಿಸಬಹುದು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ ಬರಗೂರು ರಾಮಚಂದ್ರಪ್ಪರವರ ಅಧ್ಯಕ್ಷತೆಯಲ್ಲಿ ನಡೆದ ಸಂಶೋಧನಾ ಪೀಠದಲ್ಲಿ ಮಾಹಿತಿ ಪಡೆದಿದ್ದು, ಸರ್ಕಾರದ ವತಿಯಿಂದಲೇ ಯಾವ ಯಾವ ವಿಶ್ವವಿದ್ಯಾನಿಲಯಗಳಲ್ಲಿ ಯಾವ ಯಾವ ಪೀಠಗಳು ಇರಬೇಕು ಎಂದು ತೀರ್ಮಾನಿಸುತ್ತಾರೆ. ಸಂಶೋಧನಾ ಪೀಠಗಳಿಗೆ ಸಂದರ್ಶಕ ಪ್ರಾಧ್ಯಾಪಕರು ಬರುವುದಕ್ಕೆ ಹಿಂಜರಿಯುವುದರಿಂದ, ಒಂದು ಕೋಟಿಯ ಬದಲು ಐದು ಕೋಟಿಗಳಷ್ಟು ಅನುದಾನವನ್ನು ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕುಲಸಚಿವರಿಗೆ ತಿಳಿಸಿದರು. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಸಂಶೋಧನ ಪೀಠ" ಸ್ಥಾಪಿಸುವ ಸಂಬಂಧ ಸಿದ್ಧಪಡಿಸಲಾಗಿರುವ ಕರಡು ಅಧಿನಿಯಮವನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 41(6)ರನ್ವಯ ಕುಲಾಧಿಪತಿಗಳ ಅಂಕಿತವನ್ನು ಪಡೆಯಲು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.4** | ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |

| | |
|---|---|
| ತೀರ್ಮಾನ | **ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಕ್ಕೆ ಡಾ. ಎಸ್. ವೆಂಕಟೇಶ್, ನಿವೃತ್ತ ಪ್ರಾಧ್ಯಾಪಕರು, (ತತ್ವಶಾಸ್ತ್ರ ಅಧ್ಯಯನ ವಿಭಾಗ), ವಿಜಯನಗರ, ಮೈಸೂರು ಇವರನ್ನು ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.5** | ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು Sri Sathya Sai University for Human Excellence, Kalaburagi ಸಂಸ್ಥೆಯೊಂದಿಗೆ ಪರಸ್ಪರ ಒಡಂಬಡಿಕೆಯನ್ನು ಮಾಡಿಕೊಳ್ಳಲು ಕೋರಿರುವ ಬಗ್ಗೆ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಮತ್ತು Sri Sathya Sai University for Human Excellence, Kalaburagi ಸಂಸ್ಥೆಯೊಂದಿಗೆ 'Aim to co-develop value-integrated curricula, share best practices and collaborate on projects that blend academic excellence with human values' ಉದ್ದೇಶಕ್ಕಾಗಿ ಪರಸ್ಪರ ಒಡಂಬಡಿಕೆ(MoU)ಯನ್ನು ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.6** | ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ಪ್ರಕಾರ ಪ್ರೊ. ಶಕುಂತಲಾ ವಿ., ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 01.02.026 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.7** | ಭೂ ವಿಜ್ಞಾನ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ಪ್ರಕಾರ ಪ್ರೊ. ಬಿ.ವಿ. ಸುರೇಶ್ ಕುಮಾರ್, ಪ್ರಾಧ್ಯಾಪಕರು, ಭೂ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 06.02.2026 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಭೂ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.8** | ಹಿಂದಿ ಮತ್ತು ಉರ್ದು ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿರುವ ಬಗ್ಗೆ ಅನುಸಮರ್ಥನೆಗಾಗಿ. |
| | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಡೆಪ್ಯೂಟೇಷನ್ ಆಧಾರದ ಮೇಲೆ ಬಂದಿರುವವರನ್ನು ವಿಭಾಗದ ಅಧ್ಯಕ್ಷರಾಗಿ ನೇಮಿಸಬಾರದು ಎಂದು ಯಾವ ನಿಯಮದಲ್ಲೂ ಉಲ್ಲೇಖವಿರುವುದಿಲ್ಲ. ಹಾಗೂ ಡಾ. ಕೃಷ್ಣಕುಮಾರಿ ಮನವಳ್ಳಿ, ಇವರು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರು, ಇವರ ಶೈಕ್ಷಣಿಕ ಸೇವೆಯನ್ನು ನಾವು ಬಳಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. |

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಕೃಷ್ಣಕುಮಾರಿ ಮನವಳ್ಳಿರವರನ್ನು ಇಂಗ್ಲಿಷ್ ಅಧ್ಯಯನ ವಿಭಾಗದ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿಯೂ ಸಹ ನೇಮಿಸಲಾಗಿದೆ ಎಂದು ತಿಳಿಸಿದರು. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ಪ್ರಕಾರ ಡಾ. ವಾಸಂತಿ ಎಂ., ಸಹಾಯಕ ಪ್ರಾಧ್ಯಾಪಕರು, ಹಿಂದಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 11.12.2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಹಿಂದಿ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ವಿಶ್ವವಿದ್ಯಾನಿಲಯವು ಹೊರಡಿಸಿರುವ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.**<br><br>**ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7) ಪ್ರಕಾರ ಡಾ. ಕೃಷ್ಣಕುಮಾರಿ ಮನವಳ್ಳಿ, ಪ್ರಾಧ್ಯಾಪಕರು, ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 11.12.2025 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಉರ್ದು ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿ ವಿಶ್ವವಿದ್ಯಾನಿಲಯವು ಹೊರಡಿಸಿರುವ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2025/8.9** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಕರೀಗೌಡ ಹಾಗೂ ಶ್ರೀಮತಿ ಚಿಕ್ಕತಾಯಮ್ಮ ಚಿನ್ನದ ಪದಕ ದತ್ತಿ" ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 29(2)(r)ರ ಅನ್ವಯ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇಕಡ 20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇಕಡ 80ರಷ್ಟು ಬಡ್ಡಿಯ ಹಣವನ್ನು ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಷಯದಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾಗಿ ಎರಡನೆಯ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ಪ್ರದಾನ ಮಾಡುವ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದಲ್ಲಿ "ಶ್ರೀ ಕರೀಗೌಡ ಹಾಗೂ ಶ್ರೀಮತಿ ಚಿಕ್ಕತಾಯಮ್ಮ ಚಿನ್ನದ ಪದಕ ದತ್ತಿ" ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.10** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ/ನಗದು ಬಹುಮಾನ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| | ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಈಗಿನ ವಿದ್ಯಮಾನದಲ್ಲಿ ಚಿನ್ನದ ಪದಕವನ್ನು ನೀಡುವುದಕ್ಕೆ ಸಾಧ್ಯವಾಗದ ಪರಿಸ್ಥಿತಿ ಇದೆ, ಏಕೆಂದರೆ ಚಿನ್ನದ ಬೆಲೆ ಗಗನಕ್ಕೇರಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮುಂದೆ ನಡೆಯುವಂತಹ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕದ ಬದಲಾಗಿ ನಗದು ಬಹುಮಾನವನ್ನು ನೀಡುವುದರ ಕುರಿತು ಕುಲಸಚಿವ(ಪರೀಕ್ಷಾಂಗ)ರವರಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದರು. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 29(2)(r)ರ ಅನ್ವಯ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇಕಡ 20ರಷ್ಟನ್ನು ದತ್ತಿಯ** |

ಮೂಲಧನಕ್ಕೆ ಸೇರಿಸಿ, ಉಳಿದ ಶೇಕಡ ೬೦ರಷ್ಟು ಬಡ್ಡಿಯ ಹಣವನ್ನು ಈ ಕೆಳಕಂಡ ಚಿನ್ನದ ಪದಕ / ನಗದು ಬಹುಮಾನ ದತ್ತಿಗಳನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

| ಕ್ರ.ಸಂ. | ದತ್ತಿಯ ಹೆಸರು | ಷರತ್ತು |
|---|---|---|
| 1 | ಡಾ. ಹೆಚ್.ಸಿ. ಮಹದೇವಪ್ಪ ಚಿನ್ನದ ಪದಕ | ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದಲ್ಲಿ ಎಂ.ಎ. ಕೋರ್ಸಿನ ಅಂತಿಮ ವರ್ಷದಲ್ಲಿ ಮೊದಲ ಬಾರಿಗೆ ತೇರ್ಗಡೆಯಾಗಿದ್ದು ಅತೀ ಹೆಚ್ಚು ಅಂಕ ಗಳಿಸುವ (ಯಾವುದೇ ವರ್ಷಗಳಿಗೆ/ ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದು) ಅಭ್ಯರ್ಥಿಗೆ ಚಿನ್ನದ ಪದಕವನ್ನು ನೀಡತಕ್ಕದ್ದು. |
| 2. | ಸುನಿಲ್ ಬೋಸ್ ನಗದು ಬಹುಮಾನ | ಮಹಾರಾಜ ಕಾಲೇಜು, ಕಲಾ ವಿಭಾಗದ ಸ್ನಾತಕ ಪದವಿಯಲ್ಲಿ ಮೊದಲ ಬಾರಿಗೆ ತೇರ್ಗಡೆ ಯಾಗಿದ್ದು, ಅತಿ ಹೆಚ್ಚು ಅಂಕ ಗಳಿಸುವ (ಯಾವುದೇ ವರ್ಷಗಳಿಗೆ / ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದು) ಅಭ್ಯರ್ಥಿಗೆ ನಗದು ಬಹುಮಾನವನ್ನು ನೀಡತಕ್ಕದ್ದು. |
| 3. | ಎಂ.ಕೆ. ಸವಿತಾ ಕೆ.ಎ.ಎಸ್. (ಹಿರಿಯ ಶ್ರೇಣಿ) ನಗದು ಬಹುಮಾನ | ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಭೂಗೋಳ ಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಮೊದಲ ಬಾರಿಗೆ ತೇರ್ಗಡೆ ಯಾಗಿದ್ದು, ಅತೀ ಹೆಚ್ಚು ಅಂಕ ಗಳಿಸುವ (ಯಾವುದೇ ವರ್ಷಗಳಿಗೆ/ ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸ ಲಾಗುವ ಅಂಕಗಳನ್ನು ಪಡೆದು) ಮಹಿಳಾ ಅಭ್ಯರ್ಥಿಗೆ ನಗದು ಬಹುಮಾನವನ್ನು ನೀಡತಕ್ಕದ್ದು. |
| 4. | ಎಂ.ಕೆ. ಸವಿತಾ, ಕೆ.ಎ.ಎಸ್., (ಹಿರಿಯ ಶ್ರೇಣಿ) ನಗದು ಬಹುಮಾನ | ಮಹಾರಾಜ ಕಾಲೇಜು, ಭೂಗೋಳಶಾಸ್ತ್ರ, ಅಂತಿಮ ಬಿ.ಎ., ವಿಷಯದಲ್ಲಿ ಮೊದಲ ಬಾರಿಗೆ ತೇರ್ಗಡೆಯಾಗಿದ್ದು, ಅತೀ ಹೆಚ್ಚು |

| | | | | |
|---|---|---|---|---|
| | | | ಅಂಕ ಗಳಿಸುವ (ಯಾವುದೇ ವರ್ಷಗಳಿಗೆ/ಸೆಮಿಸ್ಟರ್‌ಗಳಿಗೆ ಶ್ರೇಣಿಯನ್ನು ಪ್ರಕಟಿಸುವ ಸಲುವಾಗಿ ಗಳಿಸಲಾಗುವ ಅಂಕಗಳನ್ನು ಪಡೆದು) ಅಭ್ಯರ್ಥಿಗೆ ನಗದು ಬಹುಮಾನವನ್ನು ನೀಡತಕ್ಕದ್ದು. | |
| **ಸಾಮಾನ್ಯ ಸಭೆ 2025/8.11** | ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು (ಸ್ವಾಯತ್ತ), ಹಾಸನ ಇವರಿಗೆ Commerce, Economics, Political Science & Sociology ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. | | | |
| | ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಹಾಸನ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟಿರುವ ಹಾಸನ ಸರ್ಕಾರಿ ಕಾಲೇಜು Commerce, Economics, Political Science & Sociology ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯು ಕಾನೂನುಬಾಹಿರವಾಗಿರುತ್ತದೆ ಎಂದು ತಿಳಿದು ಒಂದು ಪಟ್ಟಿಯನ್ನು ಸಿದ್ಧಪಡಿಸಿಕೊಂಡಿರುವುದನ್ನು ಸಭೆಯ ಗಮನಕ್ಕೆ ತಂದರು. ಸದರಿ ಪಟ್ಟಿಯು ಕೆಳಕಂಡಂತಿದೆ.<br>• ಹಾಸನ ಸರ್ಕಾರಿ ಕಾಲೇಜು ಹಾಸನ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುತ್ತದೆ.<br>• ಮೈಸೂರು ವಿಶ್ವವಿದ್ಯಾನಿಲಯವು ತನ್ನ ವ್ಯಾಪ್ತಿಯ ಹೊರಗಿನ ಕಾಲೇಜಿಗೆ ಪಿಎಚ್.ಡಿ. ಸಂಶೋಧನೆ ನಡೆಸಲು ಅನುಮೋದನೆ ನೀಡುವುದಕ್ಕೆ ಅವಕಾಶವಿರುವುದಿಲ್ಲ.<br>• ಹಾಸನ ಸರ್ಕಾರಿ ಕಾಲೇಜಿನ Commerce, Economics, Political Science & Sociology ವಿಷಯಗಳು specialized program ಆಗಿರುವುದಿಲ್ಲ, Institution ಕೂಡ specialized Institution ಆಗಿರುವುದಿಲ್ಲ, ಇದಕ್ಕೆ ಅನುಮೋದನೆ ನೀಡಲು ಅವಕಾಶವಿದೆಯೇ.<br>• ಪಿ.ಹೆಚ್‌ಡಿ ರೆಗ್ಯೂಲೇಷನ್ 2016 ಮತ್ತು 2022ರಲ್ಲಿ ಸೆಕ್ಷನ್ 4 ಮತ್ತು 5ರ ಪ್ರಕಾರ ಪಿ.ಹೆಚ್‌ಡಿ ಪ್ರೋಗ್ರಾಂಗಳು, ಅಡಿಷನಲ್ ಸೆಂಟರ್‌ಗಳು ವಿಶ್ವವಿದ್ಯಾನಿಲಯದ ಒಳವ್ಯಾಪ್ತಿಯಲ್ಲಿರಬೇಕು ಎಂದು ಸ್ಪಷ್ಟವಾಗಿ ತಿಳಿಸಿದೆ. ಸದರಿ ವಿಷಯವು ಯುಜಿಸಿ ನಿಯಮಾವಳಿಗೆ ವಿರುದ್ಧವಾಗಿದೆ ಎಂದು ತಿಳಿಸಿದರು.<br>• ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡಬೇಕಾದರೆ ಹಾಸನ ವಿಶ್ವವಿದ್ಯಾನಿಲಯದಿಂದ ಮತ್ತು ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಂಡು ನೀಡಬೇಕಾಗುತ್ತದೆ ಎಂದು ತಿಳಿಸಿದರು. | | | |

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯ ತೆಗೆದುಕೊಳ್ಳುವ ನಿರ್ಣಯ ಶೈಕ್ಷಣಿಕವಾಗಿರುತ್ತದೆ. ಪಿ.ಹೆಚ್‌ಡಿ.ಯ ಸಂಶೋಧನಾ ಕೇಂದ್ರದ ಮಾನ್ಯತೆ ಇತರೆ ಸರ್ಕಾರಿ ಕಾಲೇಜುಗಳಿಗೆ ನೀಡಬಹುದಾಗಿದೆ, ಹಾಸನ ವಿಶ್ವವಿದ್ಯಾನಿಲಯವು ಮೈಸೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿಯೇ ಇದೆ, ಹಾಸನ ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ ಪಿಂಚಣಿ ಸೌಲಭ್ಯ ನೀಡಲಾಗುತ್ತಿದೆ, ಹಾಗೂ ಹಾಸನ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಸಂಶೋದನಾ ಕೇಂದ್ರ ನಡೆಸಲು ಅನುಮತಿ ನೀಡಿರುವುದಿಲ್ಲ. ಆದ್ದರಿಂದ ಅವರು ಮೈಸೂರು ವಿಶ್ವವಿದ್ಯಾನಿಲಯದ ಅನುಮತಿ ಕೇಳುತ್ತಿದ್ದಾರೆ ಎಂಬ ವಿಷಯವನ್ನು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಹಾಗೂ "The University of Mysore-Recognition of certain institutions for specified studies/specialized and Research Statutes 2008"ರ ಅಧಿನಿಯಮದ ಅನುಸಾರ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು (ಸ್ವಾಯತ್ತ), ಹಾಸನ ಇವರಿಗೆ Commerce, Economics, Political Science & Sociology ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.12** | ಆಡಳಿತ ಶಾಖೆಯ ಸಾಮಾನ್ಯ ವಿಭಾಗದ ವತಿಯಿಂದ ವಿವಿಧ ಟೆಂಡರ್‌ಗಳನ್ನು ಆಹ್ವಾನಿಸುವ ಬಗ್ಗೆ. |
| | ಕುಲಸಚಿವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಒಟ್ಟು ನಾಲ್ಕು ಟೆಂಡರ್‌ಗಳ ಅವಧಿ ಕೊನೆಗೊಳ್ಳುತ್ತಿದೆ, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ಕೆ.ಟಿ.ಪಿ.ಪಿ ನಿಯಮಾನುಸಾರ ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದು. ಹಾಗೂ ಟೆಂಡರ್‌ಗೆ ಸಂಬಂಧಿಸಿದ ವಿಷಯವನ್ನು ವಿವಿಯ ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು. |
| ತೀರ್ಮಾನ | **ಆಡಳಿತ ಶಾಖೆಯ ಸಾಮಾನ್ಯ ವಿಭಾಗದ ವತಿಯಿಂದ ವಿವಿಧ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ನಿಯಮಾನುಸಾರ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2025/8.13** | ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಆವರಣದಲ್ಲಿನ ಕಸ ವಿಲೇವಾರಿಗಾಗಿ ಹೊಸ ಟ್ರ್ಯಾಕ್ಟರ್ ಹಾಗೂ ಟ್ರೇಲರ್ ಖರೀದಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಪುರುಷ ವಿದ್ಯಾರ್ಥಿನಿಲಯ ಮತ್ತು ಮಹಿಳಾ ವಿದ್ಯಾರ್ಥಿನಿಲಯಗಳಲ್ಲಿ ಕಸದ ಸಮಸ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಸ ವಿಲೇವಾರಿಗಾಗಿ ಟ್ರ್ಯಾಕ್ಟರ್ ಅವಶ್ಯಕತೆ ಇರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಟ್ರ್ಯಾಕ್ಟರ್‌ನ ಜೊತೆಗೆ ಸಫಾಯಿ ಕರ್ಮಚಾರಿರವರನ್ನು ಸಹ ನೇಮಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಅವಶ್ಯಕತೆ ಕಂಡಬಂದಲ್ಲಿ ಸಫಾಯಿ ಕರ್ಮಚಾರಿಯವರನ್ನು ನೇಮಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. |
| ತೀರ್ಮಾನ | **ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಆವರಣದಲ್ಲಿನ ಕಸ ವಿಲೇವಾರಿಗಾಗಿ ಹೊಸ ಟ್ರ್ಯಾಕ್ಟರ್ ಹಾಗೂ ಟ್ರೇಲರ್ ಖರೀದಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

<table>
<tr><td>ಸಾಮಾನ್ಯ ಸಭೆ<br>2025/8.14</td><td>ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಟಿಪ್ಪು ಸುಲ್ತಾನ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ.</td></tr>
<tr><td>ತೀರ್ಮಾನ</td><td>ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಟಿಪ್ಪು ಸುಲ್ತಾನ ಅಧ್ಯಯನ ಪೀಠಕ್ಕೆ ಡಾ. ಸಿಸ್ಟರ್ ಆ್ಯನ್‌ಮೇರಿ, ಬಂಡಿಪಾಳ್ಯ, ಬೋಗಾದಿ, ಮೈಸೂರು ಇವರನ್ನು ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ<br>2025/8.15</td><td>ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ.</td></tr>
<tr><td>ತೀರ್ಮಾನ</td><td>ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠಕ್ಕೆ ಡಾ. ಎಂ.ವಿ. ಉಷಾದೇವಿ, ಎಸ್.ಎಸ್. ಆಶ್ರಮ ರಸ್ತೆ, ಆರ್.ಟಿ. ನಗರ ಪೋಸ್ಟ್, ಬೆಂಗಳೂರು ಇವರನ್ನು ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ<br>2025/8.16</td><td>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಸರ್. ಎಂ. ವಿಶ್ವೇಶ್ವರಯ್ಯ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ.</td></tr>
<tr><td></td><td>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಇಂಜಿನಿಯರಿಂಗ್ ಹಿನ್ನೆಲೆ ಹೊಂದಿರುವವರನ್ನು ಸದರಿ ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸಬಹುದಾಗಿತ್ತು ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಡಾ. ಸರ್. ಎಂ. ವಿಶ್ವೇಶ್ವರಯ್ಯ ಪೀಠವು ವಿಜ್ಞಾನಕ್ಕೆ ಸಂಬಂಧಿಸಿರುವ ಕಾರಣ ಇಂಜಿನಿಯರಿಂಗ್ ವಿಭಾಗಕ್ಕೆ ಬರುವುದಿಲ್ಲವೆಂದು ತಿಳಿಸಿದರು.</td></tr>
<tr><td>ತೀರ್ಮಾನ</td><td>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ. ಸರ್. ಎಂ. ವಿಶ್ವೇಶ್ವರಯ್ಯ ಪೀಠಕ್ಕೆ ಡಾ. ಶೈಲಜ ಎಂ. ಧರ್ಮೇಶ್ ಇವರನ್ನು ಮತ್ತೊಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ<br>2025/8.17</td><td>ವಿಶ್ವವಿದ್ಯಾನಿಲಯದಲ್ಲಿ ನಿಷ್ಕ್ರೀಯಗೊಂಡಿರುವ ಪೀಠಗಳನ್ನು ಹಸ್ತಾಂತರಿಸುವ ಬಗ್ಗೆ.</td></tr>
<tr><td>ತೀರ್ಮಾನ</td><td>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಿಷ್ಕ್ರೀಯಗೊಂಡಿರುವ ಈ ಕೆಳಕಂಡ ಪೀಠಗಳನ್ನು ಅದರ ಮುಂದೆ ನಮೂದಿಸಿರುವ ಅಧ್ಯಯನ ವಿಭಾಗಗಳಿಗೆ ವರ್ಗಾಯಿಸಲು ಹಾಗೂ ವಿಭಾಗಗಳಿಗೆ ವರ್ಗಾಯಿಸಿದ ನಂತರ ಸಂಬಂಧಪಟ್ಟ ವಿಭಾಗದ ಅಧ್ಯಕ್ಷರುಗಳು ಪೀಠಗಳ ಅಡಿಯಲ್ಲಿ ಪೀಠಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳನ್ನು (ಸಮ್ಮೇಳನ, ವಿಚಾರ ಸಂಕಿರಣ, ಉಪನ್ಯಾಸ ಇತ್ಯಾದಿ) ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.
<table>
<tr><th>Sl.No.</th><th>Name of the Chair</th><th>Handover the Dept.</th></tr>
<tr><td>1.</td><td>Banking Management (Canara Bank)</td><td>DoS in Commerce</td></tr>
<tr><td>2.</td><td>Banking Management (Vijaya Bank)</td><td>DoS in Commerce</td></tr>
<tr><td>3.</td><td>Environmental Science</td><td>DOS in Environmental Science</td></tr>
</table></td></tr>
</table>

<table>
<tr><td></td><td>
<table>
<tr><td>4.</td><td>Hindu Philosophy</td><td>DOS in Philosophy</td></tr>
<tr><td>5.</td><td>Jainology</td><td>DOS in Jainology</td></tr>
<tr><td>6.</td><td>Middle Eastern Studies</td><td>DoS in History</td></tr>
<tr><td>7.</td><td>Sri Sathya Sai Baba (Case Studies)</td><td>DOS in Philosophy</td></tr>
</table>
</td></tr>
<tr><td>ಸಾಮಾನ್ಯ ಸಭೆ 2025/8.18</td><td>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 29(2)(r)ರ ಅನ್ವಯ ದಾನಿಗಳು ದತ್ತಿಯ ನಿಬಂಧನೆಯಲ್ಲಿ ತಿಳಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇಕಡ 20ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇಕಡ 80ರಷ್ಟು ಬಡ್ಡಿಯ ಹಣವನ್ನು ಈ ಕೆಳಕಂಡ ಚಿನ್ನದ ಪದಕ / ನಗದು ಬಹುಮಾನ ದತ್ತಿಗಳನ್ನು ಸ್ಥಾಪಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.
<table>
<tr><th>ಕ್ರ.ಸಂ.</th><th>ದತ್ತಿಯ ಹೆಸರು</th><th>ಷರತ್ತು</th></tr>
<tr><td>1</td><td>ಶ್ರೀಮತಿ ಸಾವಿತ್ರಮ್ಮ ಮತ್ತು ಶ್ರೀ ಕೃಷ್ಣಪ್ಪ ಗೌಡ, ನೆರಟೂರು ಚಿನ್ನದ ಪದಕ</td><td>"ಸ್ನಾತಕ ಪದವಿಯ (ಬಿ.ಎಸ್ಸಿ.) ಭೌತಶಾಸ್ತ್ರ ವಿಷಯದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬ ವಿದ್ಯಾರ್ಥಿಗೆ ಚಿನ್ನದ ಪದಕವನ್ನು" ನೀಡತಕ್ಕದ್ದು.</td></tr>
<tr><td>2.</td><td>ಪ್ರೊ. ಎನ್.ಕೆ. ಲೋಕನಾಥ್, ಕುಲಪತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಚಿನ್ನದ ಪದಕ</td><td>"ಭೌತಶಾಸ್ತ್ರ (ಸ್ನಾತಕೋತ್ತರ) ವಿಷಯದಲ್ಲಿ ಅತೀ ಹೆಚ್ಚು ಅಂಕ ಪಡೆದ ಒಬ್ಬ ವಿದ್ಯಾರ್ಥಿಗೆ ಚಿನ್ನದ ಪದಕವನ್ನು ನೀಡತಕ್ಕದ್ದು.</td></tr>
</table>
</td></tr>
<tr><td>ಸಾಮಾನ್ಯ ಸಭೆ 2025/8.19</td><td>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನ ಮತ್ತು ವಿಸ್ತರಣಾ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ.</td></tr>
<tr><td>ತೀರ್ಮಾನ</td><td>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣೆ, ಸಂಶೋಧನ ಮತ್ತು ವಿಸ್ತರಣಾ ಕೇಂದ್ರಕ್ಕೆ ಪ್ರೊ. ಕೇಶವನ್ ಪ್ರಸಾದ್ ಕೆ., ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರನ್ನು ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ 2025/8.20</td><td>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ.</td></tr>
<tr><td>ತೀರ್ಮಾನ</td><td>ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠಕ್ಕೆ ಡಾ. ವಿಜಯಕುಮಾರಿ ಎಸ್. ಕರಿಕಲ್, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
</table>

| | |
|---|---|
| ಸಾಮಾನ್ಯ ಸಭೆ 2025/8.21 | PROMOTION BY SELECTION TO THE POST OF THE DEPUTY REGISTRAR |
| ತೀರ್ಮಾನ | **The Syndicate has approved the recommendations of the board of Appointment, the meeting which was held on 15-12-2025, for promotion of Assistant Registrar to the post of Deputy Registrar from the date of the approval of the syndicate.** |
| ಸಾಮಾನ್ಯ ಸಭೆ 2025/8.22 | ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಹಾಗೂ ಆರ್ಕಿಟೆಕ್ಚರ್, ಇಂಜಿನಿಯರಿಂಗ್ ಕಾಲೇಜು, ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜಿಗೆ ಸಂಬಂಧಿಸಿದ ಬಗ್ಗೆ. |
| ತೀರ್ಮಾನ | **ಮುಂದೂಡಲಾಯಿತು.** |
| ಸಾಮಾನ್ಯ ಸಭೆ 2025/8.23 | ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ ಹಾಗೂ ಕೇಂದ್ರದಲ್ಲಿ ಬೋಧಕ ಸಿಬ್ಬಂದಿ ಸೇವೆಯನ್ನು ಮುಂದುವರೆಸುವ ಬಗೆಗೆ. |
| ತೀರ್ಮಾನ | **ಯುಜಿಸಿ, ನವದೆಹಲಿ ಪತ್ರ ಸಂಖ್ಯೆ: D.O. No. 512/2024(MMTTP/Misc) Part 2 ದಿನಾಂಕ: 02.04.2025ರಲ್ಲಿ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರಗಳನ್ನು 2025-26ನೇ ಸಾಲಿಗೆ ಮುಂದುವರೆಸಿದ್ದು, ಸದರಿ ಕೇಂದ್ರಗಳಲ್ಲಿ ಎಂ.ಎಂ.ಟಿ.ಟಿ.ಸಿ. ಮಾರ್ಗಸೂಚಿ ಅನ್ವಯ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರವನ್ನು ಹಾಗೂ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳನ್ನು ಹಾಗೂ ಬೋದಕ ಸಿಬ್ಬಂದಿಯಾದ ಡಾ. ಎಲ್. ನಂಜುಂಡಸ್ವಾಮಿ, ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು (Tenure Basis) ಇವರನ್ನು ದಿನಾಂಕ: 01.04.2025 ರಿಂದ 31.03.2026ರವರೆಗೆ ಮುಂದುವರೆಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |

**<u>ಇತರೆ ವಿಷಯಗಳು:</u>**

1. ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮಹಾರಾಜ ಕಾಲೇಜಿನ ಪ್ರಾಂಶುಪಾಲರು ದಿನಾಂಕ 16-04-2025ರಂದು ರೂ. 90,020/- (ತೊಂಬತ್ತೊಂದು ಸಾವಿರದ ಇಪತ್ತು ರೂಪಾಯಿ)ಗಳ ಚೆಕ್‌ಅನ್ನು ಶ್ರೀ ಗೌತಮ್ ಎಂಬ ವ್ಯಕ್ತಿಗೆ ನೀಡಿರುತ್ತಾರೆ. ಚೆಕ್‌ನಂಬರ್ ನಮೂದಿಸಿರುತ್ತೇನೆ. ತುರ್ತಾಗಿ ಇದರ ಬಗ್ಗೆ ಕ್ರಮಕೈಗೊಳ್ಳಬೇಕು ಎಂಬುದು ನಮ್ಮೆಲ್ಲಾ ಸಿಂಡಿಕೇಟ್ ಸದಸ್ಯರ ಸಹಿ ಮಾಡಿರುವ ಮನವಿ ಪತ್ರದೊಂದಿಗೆ ದಾಖಲೆಯನ್ನು ಸಹ ನೀಡುತ್ತಿದ್ದೇವೆ ಎಂದು ತಿಳಿಸಿದರು.

   **ಮಾನ್ಯ ಕುಲಪತಿಗಳು ಮಾತನಾಡಿ, ಪರಿಶೀಲಿಸಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.**

2. ಮಾನ್ಯ ಕುಲಪತಿಯವರು ಮಾತನಾಡಿ, ಡಾ. ಟಿ.ಆರ್. ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು ಇವರು ವಿಶ್ವವಿದ್ಯಾನಿಲಯದ ಲೋಗೊ ಬಳಸಿಕೊಂಡು ವಿಶ್ವವಿದ್ಯಾನಿಲಯದ ಕುಲಪತಿಗಳ ವಿರುದ್ಧ ಟೀಕೆ ಮಾಡಿರುತ್ತಾರೆ. ಇವರಿಗೆ ಲೋಗೋ ಬಳಸುವುದಕ್ಕೆ ನಾವು ಅನುಮತಿ ನೀಡಿರುವುದಿಲ್ಲ. ಆದರೂ ಸಹ ಲೋಗೋ ಬಳಸಿಕೊಂಡು ವಿಶ್ವವಿದ್ಯಾನಿಲಯ ಮತ್ತು ಕುಲಪತಿಗಳ ವಿರುದ್ಧ UGC, Ministry of Eudcation, Governor, ಸರ್ಕಾರ ಮತ್ತು ಲೋಕಾಯುಕ್ತಕ್ಕೆ ಸಿಂಡಿಕೇಟ್‌ನ ಸದಸ್ಯರಾಗಿ ದೂರು ನೀಡಿರುತ್ತಾರೆ, ಸಿಂಡಿಕೇಟ್‌ನಲ್ಲಿ ನಡೆಯುವ ವಿಷಯವನ್ನು ಇತರರಿಗೆ ವಾಟ್ಸಫ್ ಮೂಲಕ ನೀಡಿರುತ್ತಾರೆ, ಈ ಸಂಬಂಧ ಸಿಂಡಿಕೇಟ್ ಸದಸ್ಯರ ಸಮ್ಮುಖದಲ್ಲಿ ಡಾ. ಟಿ.ಆರ್. ಚಂದ್ರಶೇಖರ್‌ರವರಿಗೆ ನೋಟೀಸ್

ನೀಡುತ್ತಿರುವ ವಿಷಯದ ಕುರಿತು ಸಭೆಯಲ್ಲಿ ತಿಳಿಸಿದರು ಹಾಗೂ ಆ Noticeಅನ್ನು ಸಭೆಯಲ್ಲಿ ಓದಿದರು. 'This notice is issued in the larger institutional interest of safeguarding the autonomy, dignity and reputation of the University'. ಡಾ. ಟಿ.ಆರ್. ಚಂದ್ರಶೇಖರ್‌ರವರಿಗೆ ನೋಟೀಸ್‌ಅನ್ನು ಸಭೆಯಲ್ಲಿ ಜಾರಿ ಮಾಡಿದರು. ನೋಟೀಸ್‌ಗೆ ಸಂಬಂಧಿಸಿದಂತೆ ಉತ್ತರವನ್ನು ಪತ್ರ ಮುಖೇನ ಸಲ್ಲಿಸಬೇಕೆಂದು ತಿಳಿಸಿದರು.

೩. ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ಒಂದು ವರ್ಷದ ಸೇವೆ ಸಲ್ಲಿಸಿ, ಸಲಹೆ ಹಾಗೂ ಸಹಕಾರ ನೀಡಿ ನಿರ್ಗಮಿಸುತ್ತಿರುವ ಡಾ. ಎಂ. ಪುಷ್ಪವತಿ, ಡಾ. ಬಿ.ಆರ್. ಜಯಕುಮಾರಿ ಹಾಗೂ ಡಾ. ಮಹೇಶ್ ಟಿ.ಬಿ. ರವರುಗಳನ್ನು ಅಭಿನಂದಿಸಿ, ಸಭೆಯು ಹೂಗುಚ್ಛವನ್ನು ನೀಡುವ ಮುಖಾಂತರ ಸದರಿಯವರುಗಳಿಗೆ ಅಭಿನಂದಿಸಲಾಯಿತು.

ಡಾ. ಪುಷ್ಪವತಿ ಎಂ. ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿದ್ದ ಸಂದರ್ಭದಲ್ಲಿ AIISHನ ನಿರ್ದೇಶಕರಾಗಿ ತನ್ನದೇ ಆದಂತಹ ಕೆಲವೊಂದು ಒತ್ತಡದ ಜೊತೆಗೆ ಶೈಕ್ಷಣಿಕವಾಗಿ ಕೆಲಸವನ್ನು ನಿರ್ವಹಿಸಬೇಕಾದ ಸಂದರ್ಭದಲ್ಲಿ ಕೆಲವೊಂದು ಸಭೆಗಳಿಗೆ ಹಾಜರಾಗಲು ಸಾಧ್ಯವಾಗಿರುವುದಿಲ್ಲದಿರುವುದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತಾ, ಒಂದು ವರ್ಷಗಳ ಕಾಲ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿದ್ದುದಕ್ಕೆ ಸಂತೋಷವನ್ನು ಸಹ ವ್ಯಕ್ತಪಡಿಸುತ್ತಾ, ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಯಾವುದೇ ಕೆಲಸವಿದ್ದರೂ ತಾವು ನಿರ್ವಹಿಸುವುದಾಗಿ ತಿಳಿಸಿದರು. ಜೊತೆಗೆ ಮಾನ್ಯ ಕುಲಪತಿಗಳಿಗೆ ತನ್ನದೇ ಆದ ಸಾಕಷ್ಟು ಜವಾಬ್ದಾರಿಗಳಿರುತ್ತವೆ. ಸಿಂಡಿಕೇಟ್‌ನ ಸದಸ್ಯರುಗಳಾದ ತಾವುಗಳು ಅವರುಗಳಿಗೆ ಒತ್ತಾಸೆಯಾಗಿ ಕೆಲಸ ನಿರ್ವಹಿಸಬೇಕೆಂದು ತಿಳಿಸುತ್ತಾ, ಸಿಂಡಿಕೇಟ್‌ನ ಅಧ್ಯಕ್ಷರುಗಳಿಗೆ ಹಾಗೂ ಸದಸ್ಯರುಗಳಿಗೆ ವಂದನೆಯನ್ನು ಅರ್ಪಿಸಿದರು.

ಡಾ. ಮಹೇಶ್ ಟಿ.ಬಿ. ರವರು ಮಾತನಾಡಿ, ಬಿ.ಎಡ್., ಕಾಲೇಜಿನ ಪರೀಕ್ಷಾ ಫಲಿತಾಂಶವನ್ನು ಅರ್ಧ ಗಂಟೆಯಲ್ಲಿ ನೀಡುವುದಕ್ಕೆ ಸಹಕರಿಸಿದ ಮಾನ್ಯ ಕುಲಪತಿಗಳು, ಕುಲಸಚಿವರು, ಕುಲಸಚಿವ(ಪರೀಕ್ಷಾಂಗ)ರವರುಗಳಿಗೆ ಧನ್ಯವಾದಗಳನ್ನು ತಿಳಿಸುತ್ತಾ, ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿರುವುದಕ್ಕೆ ಸಂತಸವನ್ನು ವ್ಯಕ್ತಪಡಿಸುತ್ತಾ, ಸಿಂಡಿಕೇಟ್‌ನ ಅಧ್ಯಕ್ಷರುಗಳಿಗೆ ಹಾಗೂ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೂ ವಂದನೆಯನ್ನು ಅರ್ಪಿಸಿದರು.

ಶ್ರೀ ಮಹದೇಶರವರು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಾಗಿ ನಿರ್ಗಮಿಸುತ್ತಿರುವ ಡಾ. ಎಂ. ಪುಷ್ಪವತಿ, ಡಾ. ಬಿ.ಆರ್. ಜಯಕುಮಾರಿ ಹಾಗೂ ಡಾ. ಮಹೇಶ್ ಟಿ.ಬಿ. ರವರುಗಳು ನೀಡಿರುವ ಸಲಹೆ ಹಾಗೂ ಸಹಕಾರಗಳನ್ನು ಸಹ ಸ್ಮರಿಸುತ್ತಾ ಅವರುಗಳನ್ನು ಅಭಿನಂದಿಸಿದರು.

ಪ್ರೊ. ಶಬೀರ್ ಮೊಹಮ್ಮದ್ ಮುಸ್ತಫ ರವರು ಮಾತನಾಡಿ, ಡಾ. ಪುಷ್ಪವತಿ ಯವರು NAACನ ಬಗ್ಗೆ ಹಲವು ಸಲಹೆಗಳನ್ನು ಈಗಾಗಲೇ ನೀಡಿರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯಕ್ಕೆ NAAC ನವರು ಭೇಟಿ ನೀಡುವ ಸಂದರ್ಭದಲ್ಲಿ ಡಾ. ಪುಷ್ಪವತಿ ಎಂ. ರವರನ್ನು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳಲು ಅವಕಾಶ ನೀಡಬೇಕೆಂದು ತಿಳಿಸಿದರು.

4. ಶ್ರೀ ಕೆ. ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಯಾರು ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಸಂಶೋಧನೆ ನಡೆಸಲು ಮಾರ್ಗದರ್ಶನ ನೀಡಲು ನಿರಾಕರಿಸುತ್ತಿದ್ದಾರೋ ಅಂತಹ ಅಧ್ಯಾಪಕರು/ಪ್ರಾಧ್ಯಾಪಕರುಗಳ ವಿರುದ್ಧ ಕ್ರಮವಾಗಬೇಕೆಂದು ತಿಳಿಸಲಾಗಿತ್ತು, ಅದರ ಬಗ್ಗೆ ಯಾವ ಕ್ರಮಕ್ಕೈಗೊಳ್ಳಲಾಗಿದೆ ಎಂದು ಕೇಳಿದರು.

5. ಮಾನ್ಯ ಕುಲಪತಿಗಳು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಲು ಐದು ಮಂದಿ ಅಧ್ಯಾಪಕರು/ಪ್ರಾಧ್ಯಾಪಕರುಗಳಲ್ಲಿ ಇಬ್ಬರು ಪ್ರಾಧ್ಯಾಪಕರುಗಳು ಮಾರ್ಗದರ್ಶನ ನೀಡಲು ಒಪ್ಪಿರುತ್ತಾರೆ. ಆದರೆ ಮೂರು ಮಂದಿ ಅಧ್ಯಾಪಕರುಗಳಾದ ಡಾ. ದಿವಾಕರ್ ಚಾಂಡಿ, ಡಾ. ಗೋವಿಂದರಾಜು ಮತ್ತು ಡಾ. ಆನಂದ್ ಇವರುಗಳು ಮಾರ್ಗದರ್ಶನ ನೀಡಲು ಒಪ್ಪಿರುವುದಿಲ್ಲವೆಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ಯಾವ ಅಧ್ಯಾಪಕರುಗಳು ಮಾರ್ಗದರ್ಶನ ನೀಡಲು ಒಪ್ಪಿರುವುದಿಲ್ಲವೋ ಅಂತಹವರ ಒಂದು ಸಿಂಡಿಕೇಟ್ ಸಭೆಯಲ್ಲಿ ಮಾರ್ಗದರ್ಶನವನ್ನು ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಲೇಬೇಕೆಂದು ತಿಳಿಸಿರುವ ಅಂಶವನ್ನು ಸದರಿ ಮೂರು ಪ್ರಾಧ್ಯಾಪಕರುಗಳಿಗೆ ನೋಟಿಸ್ ನೀಡುವ ಮುಖಾಂತರ ಪತ್ರವನ್ನು ಬರೆಯುವಂತೆಯೂ ಹಾಗೂ ಸದರಿ ಮೂವರು ಅಧ್ಯಾಪಕರುಗಳು ಮಾರ್ಗದರ್ಶನ ನೀಡಲು ಒಪ್ಪದಿದ್ದಲ್ಲಿ ಅವರ ವೇತನವನ್ನು ಮಾತ್ರ ಬಿಡುಗಡೆಗೊಳಿಸುವಂತೆ ಹಾಗೂ ಇನ್ನುಳಿದ ಇತರೆ ಸೌಲಭ್ಯಗಳನ್ನು ತಡೆಹಿಡಿಯಲಾಗುವುದೆಂದು ನೋಟಿಸ್‌ಅನ್ನು ನೀಡಿ, ಸೂಕ್ತಕ್ರಮವನ್ನು ಕೈಗೊಳ್ಳಬೇಕೆಂದು ಕುಲಸಚಿವರಿಗೆ ತಿಳಿಸಿದರು.

6. ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯಕ್ಕೂ ಸರ್ ಎಂ. ವಿಶ್ವೇಶ್ವರಯ್ಯನವರಿಗೂ ಒಂದು ಅವಿನಾಭಾವ ಸಂಬಂಧವಿದೆ. ಜೊತೆಗೆ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಂಗ್ ಕಾಲೇಜಿರುವುದರಿಂದ ಕಾಲೇಜಿನ ಮುಖ್ಯದ್ವಾರ/ಆವರಣದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಪುತ್ಥಳಿಯನ್ನು ಸ್ಥಾಪಿಸಬೇಕೆಂದು ತಿಳಿಸಿದರು.

ಶ್ರೀ ಮಹದೇಶು ರವರು ಮಾತನಾಡಿ, ಈ ಹಿಂದೆಯೇ ಮಾನ್ಯ ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಪುತ್ಥಳಿಯನ್ನು ಸ್ಥಾಪಿಸಬೇಕೆಂಬ ಚಿಂತನೆಯಿರುವುದನ್ನು ಅನೌಪಚಾರಿಕವಾಗಿ ತಿಳಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಪುತ್ಥಳಿಯನ್ನು ಸ್ಥಾಪಿಸಬೇಕೆಂಬ ಇಚ್ಛೆಯಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಇಂಜಿನಿಯರಿಂಗ್ ಕಾಲೇಜಿನ ಮಾರ್ಗವನ್ನು ಸರ್ ಎಂ. ವಿಶ್ವೇಶ್ವರಯ್ಯ ಮಾರ್ಗ ಎಂದು ನಾಮಕರಣ ಮಾಡಬೇಕೆಂಬ ಆಶಯವನ್ನು ವ್ಯಕ್ತಪಡಿಸಿದರು.

**ತೀರ್ಮಾನ: ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಪುತ್ಥಳಿಯನ್ನು ಸ್ಥಾಪಿಸಲು ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಮಾರ್ಗ ಎಂದು ನಾಮಕರಣ ಮಾಡಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಸಮ್ಮತಿಸಿತು.**

7. ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರವೇಶಾತಿ ಹೊಂದುವ ವಿದ್ಯಾರ್ಥಿಯ ಸಂಪೂರ್ಣ ಮಾಹಿತಿಗೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದ ಸಾಫ್ಟ್‌ವೇರ್‌ಅನ್ನು ಅಳವಡಿಸಿಲ್ಲದಿರುವ ಗಿದು ಗಮನಕ್ಕೆ ಬಂದಿದೆ. ಜೊತೆಗೆ ವಿದ್ಯಾರ್ಥಿಯು ಪಾವತಿಸುವ ಪ್ರವೇಶಾತಿ ಶುಲ್ಕ, ಪರೀಕ್ಷಾ ಶುಲ್ಕ, ಪಿಎಚ್.ಡಿ ಶುಲ್ಕಗಳ ಹಾಗೂ ಇತರೆ ಎಲ್ಲಾ ಮಾಹಿತಿಗಳು ಒಂದೇ ಸಾಫ್ಟ್‌ವೇರ್‌ನಲ್ಲಿ ಬರುವ ರೀತಿನಲ್ಲಿ ಸಾಫ್ಟ್‌ವೇರ್‌ಅನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳಬೇಕೆಂದು ತಿಳಿಸುತ್ತಾ, ಸದರಿ ಮಾಹಿತಿಯು ವಿಶ್ವವಿದ್ಯಾನಿಲಯದ ಅಧಿಕಾರಿಗಳಾದ ತಾವು ಸಹ ವಿದ್ಯಾರ್ಥಿಯ ಮಾಹಿತಿಯನ್ನು ನೋಡುವಂತಿರಬೇಕೆಂದು ಸಲಹೆ ನೀಡಿದರು.

ಮುಂದುವರೆದು, ವಿಶ್ವವಿದ್ಯಾನಿಲಯದಲ್ಲಿ ಮಾಡಿಕೊಳ್ಳುವ ಒಡಂಬಡಿಕೆ ಹಾಗೂ ಅವುಗಳ ಅವಧಿ, ಬಾಡಿಗೆ ಸಂಗ್ರಹಿಸುವ ಬಗೆಗಿನ ಮಾಹಿತಿ ಹಾಗೂ ಇತರೆ ವಿಶ್ವವಿದ್ಯಾನಿಲಯದಲ್ಲಿ ಅವಶ್ಯಕವಾಗಿ ಬೇಕಾಗಿರುವಂತಹವುಗಳಿಗೆ ಸಂಬಂಧಿಸಿದಂತೆ ಸಾಫ್ಟ್‌ವೇರ್ ಅನ್ನು ಅಳವಡಿಸಿಕೊಂಡರೆ ಕೆಲಸ

ಕಾರ್ಯಗಳು ಸುಲಲಿತವಾಗಿ ನಡೆಯಲು ಅನುವಾಗುತ್ತದೆ ಎಂಬ ಅಂಶವನ್ನು ಸಹ ಸಭೆಯ ಗಮನಕ್ಕೆ ತರುತ್ತಾ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ಕಾರ್ಯನಿರ್ವಾಹಕರು ಸರಿಯಾದ ಸಮಯಕ್ಕೆ ಕಡತವನ್ನು ಮಂಡಿಸದೆ ಹೋದಾಗ ತೊಂದರೆಯಾಗುವ ಸಂಭವವಿರುವುದರಿಂದ ಸಾಫ್ಟ್‌ವೇರ್‌ಅನ್ನು ಅಳವಡಿಸಿಕೊಂಡರೆ ತಮಗೂ ಕಂಪ್ಯೂಟರ್‌ನಲ್ಲಿ ಮಾಹಿತಿ ದೊರಕುವುದರಿಂದ ಕೆಲಸವು ಸುಲಲಿತವಾಗುತ್ತದೆ ಎಂದು ತಿಳಿಸುತ್ತಾ, ಪ್ರಸ್ತುತ ತಂತ್ರಜ್ಞಾನವು ಶರವೇಗದಲ್ಲಿ ಮುಂದುವರಿಯುತ್ತಿರುವುದರಿಂದ ತಂತ್ರಜ್ಞಾನವನ್ನು ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡರೆ ಒಳಿತೆಂದು ತಿಳಿಸಿದರು.

ತೀರ್ಮಾನ: ವಿದ್ಯಾರ್ಥಿಗಳ ಸಂಪೂರ್ಣ ಮಾಹಿತಿಯನ್ನು ಒಂದೇ ಕಡೆ ಬರುವಂತಹ ರೀತಿಯಲ್ಲಿ Digital Platform ಅನ್ನು ಅಳವಡಿಸುವುದು. ಶ್ರೀ ಗೋಕುಲ್ ಗೋವರ್ಧನ್ ಅವರು ತಿಳಿಸಿರುವಂತೆ ಬಾಡಿಗೆ, ಒಡಂಬಡಿಕೆ ಹಾಗೂ ಇತರೆ ಮಾಹಿತಿಗಳಿಗೆ ಸಂಬಂಧಿಸಿದ ಸಾಫ್ಟ್‌ವೇರ್‌ಅನ್ನು ಅಳವಡಿಸಿಕೊಳ್ಳಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

೮. ಡಾ. ಹೆಚ್.ಎಸ್. ನಟರಾಜ ಅವರು ಮಾತನಾಡಿ, ಶಿಷ್ಯವೇತನ ಪಡೆಯುತ್ತಿದ್ದ ಸುಮಾರು ೬೮ ಸಂಶೋಧನಾ ವಿದ್ಯಾರ್ಥಿಗಳು ಮಹಾಪ್ರಬಂಧವನ್ನು ಸಲ್ಲಿಸದೆ ಹೋಗಿರುವುದು ತಿಳಿದುಬಂದಿರುವುದರಿಂದ ಅವರುಗಳ ವಿರುದ್ಧ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು.

೯. ಮಾನ್ಯ ಕುಲಪತಿಗಳು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳು ಸಂಶೋಧನೆಯನ್ನು 4 ವರ್ಷಗಳ ನಂತರ ಅವರು ಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕು ಇಲ್ಲವಾದಲ್ಲಿ ಅವರ ಶಿಷ್ಯವೇತನವನ್ನು ರದ್ದುಗೊಳಿಸಲಾಗುವುದು ಎಂದು ಕ್ರಮವನ್ನು ಈಗಾಗಲೇ ಜರುಗಿಸಲಾಗಿದೆ. ಕೆಲವು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಪಿಎಚ್.ಡಿ. ಪದವಿಯನ್ನು ಪಡೆಯುವ ನಿಟ್ಟಿನಲ್ಲಿ ಕೆಲಸ ಮಾಡದೆ ಬೇರೆ ತೆರನಾದ ಕೆಲಸಗಳಲ್ಲಿ ತೊಡಗಿರುತ್ತಾರೆ. ಯುಜಿಸಿಯ ನಿಯಮಾವಳಿಗಳ ಪ್ರಕಾರ ಎರಡು ವರ್ಷಗಳಲ್ಲೇ ಸಂಶೋಧನಾ ವಿದ್ಯಾರ್ಥಿಗಳು ಪ್ರಬಂಧವನ್ನು ಮಂಡಿಸಬೇಕಾಗಿರುತ್ತದೆ. ಇಲ್ಲವಾದಲ್ಲಿ ಅವರನ್ನು terminate ಮಾಡುವ ಅವಕಾಶ ವಿಶ್ವವಿದ್ಯಾನಿಲಯಕ್ಕಿದೆ. ಜೊತೆಗೆ ಕುಲಸಚಿವ (ಪರೀಕ್ಷಾಂಗ)ರವರಿಗೆ ಸಂಶೋಧನಾ ವಿದ್ಯಾರ್ಥಿಗಳು ಯಾರ್ಯಾರು ಪ್ರಬಂಧವನ್ನು (dissertation) ಮಂಡಿಸಿರುವುದಿಲ್ಲವೋ ಅಂತಹ ವಿದ್ಯಾರ್ಥಿಗಳಿಗೆ 6 ತಿಂಗಳ ಸಮಯಾವಕಾಶವನ್ನು ನೀಡಿಯೂ ಸಹ ಪ್ರಬಂಧವನ್ನು ಸಲ್ಲಿಸದಿದ್ದಲ್ಲಿ ಅಂತಹ ವಿದ್ಯಾರ್ಥಿಗಳ ಶಿಷ್ಯವೇತನವನ್ನು ರದ್ದುಗೊಳಿಸಲು ಹಾಗೂ ಅವರುಗಳನ್ನು terminate ಮಾಡಲು ಕ್ರಮಕೈಗೊಳ್ಳಲಾಗುವುದೆಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯದಲ್ಲಿರುವ ಎಲ್ಲಾ ವಿದ್ಯಾರ್ಥಿಗಳು ಒಂದೇ ಆಗಿರುವುದರಿಂದ, ಯುಜಿಸಿ ನಿಯಮಾವಳಿ ಹಾಗೂ ವಿಶ್ವವಿದ್ಯಾನಿಲಯದ ನಿಯಮಾವಳಿಗಳನ್ನು ಪಾಲಿಸಬೇಕಾಗಿರುವುದು ಎಲ್ಲರ ಕರ್ತವ್ಯವೆಂದು ತಿಳಿಸಿದರು.

೧೦. ಶ್ರೀ ಮಹದೇಶು ರವರು ಮಾತನಾಡಿ, ಶಿಕ್ಷಣ ಅಧ್ಯಯನ ವಿಭಾಗದಲ್ಲಿನ ಎಂ.ಎಡ್.ಗೆ ಸಂಬಂಧಿಸಿದ ಕಾರ್ಯಭಾರದ ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶಿಕ್ಷಣ ಅಧ್ಯಯನ ವಿಭಾಗದ ಎಂ.ಎಡ್.ಗೆ ಸಂಬಂಧಿಸಿದ ಕಾರ್ಯಭಾರವು ಇರುವುದಿಲ್ಲ. ಪ್ರೊ. ಕೆ.ಬಿ. ಪ್ರವೀಣ್ ರವರು ಕುಲಸಚಿವರ ಹುದ್ದೆಯಿಂದ ಮಾತೃ ಸಂಸ್ಥೆಯಾದ ವಿಶ್ವವಿದ್ಯಾನಿಲಯಕ್ಕೆ ಬಂದ ನಂತರ ಅವರಿಗೆ 16 ಗಂಟೆಗಳ ಕಾರ್ಯಭಾರನ್ನು ನೀಡಲಾಗಿದೆ. ಹಾಗೂ ಸರ್ಕಾರದಿಂದ ಒಂದು ಅಧ್ಯಯನ ವಿಭಾಗದಲ್ಲಿ ವಿಷಯಕ್ಕೆ ತಕ್ಕಂತೆ ಇಂತಿಷ್ಟೆ ಕಾರ್ಯಭಾರವನ್ನು ನಿಗಧಿಗೊಳಿಸಲು ಹಾಗೂ ಅಧ್ಯಾಪಕರುಗಳು ಇರಬೇಕೆಂಬ ನಿಯಮವು

ಜಾರಿಯಾಗಲಿದೆ. ಸದರಿ ವಿಷಯವಾಗಿ ಒಂದು ಸಭೆಯು ಸಹ ಇರುವುದನ್ನು ಸಭೆಯ ಗಮನಕ್ಕೆ ತಂದರು.

11. ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, Dissertation ಬಗ್ಗೆ ಪ್ರಸ್ತಾಪಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಒಬ್ಬ ಪ್ರಾಧ್ಯಾಪಕರು 40 ಗಂಟೆಗಳ ಪಾಠ ಮಾಡಬೇಕೆಂದು ಯುಜಿಸಿ ನಿಯಾಮವಳಿನಲ್ಲಿದೆ. ಅದರಲ್ಲಿ ಸೆಮಿನಾರ್‌ಗಳನ್ನು ಮಾಡುವುದು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವುದು, Dissertation ಅನ್ನು ಮಾಡುವುದು ಹಾಗೂ ಇತರೆ ವಿಷಯಗಳಿವೆ. ಯುಜಿಸಿ, ಎನ್‌ಸಿಟಿಇ, ಎಐಸಿಟಿಯ ಅನುಮೋದನೆ ನೀಡಿದ ನಂತರ ವಿಶ್ವವಿದ್ಯಾನಿಲಯವು ಸ್ವಾಯತ್ತತೆಯನ್ನು ನೀಡುವಾಗ ಅಗತ್ಯವಾದ ಶಿಫಾರಸ್ಸುಗಳನ್ನು ನೀಡಿ ಅನುಮೋದನೆಯನ್ನು ನೀಡಬೇಕಾಗುತ್ತದೆ ಎಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯದ ಒಬ್ಬ ಪ್ರಾಧ್ಯಾಪಕರು ಕಾಲೇಜಿಗೆ ನೀಡಿರುವ ಸ್ವಾಯತ್ತತೆಯನ್ನು ಅನುಮೋದನೆಯನ್ನು ರದ್ದುಗೊಳಿಸಿದ್ದಾರೆ. ಇದರಿಂದ ವಿಶ್ವವಿದ್ಯಾನಿಲಯಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಎಲ್ಲಾ ಪ್ರಾಧ್ಯಾಪಕರುಗಳು ವಿಶ್ವವಿದ್ಯಾನಿಲಯದ ನಿಯಮಾವಳಿಗಳನ್ನು ಹಾಗೂ ಕಾಲೇಜಿಗೆ ಸ್ವಾಯತ್ತತೆಯ ಬಗ್ಗೆ ಮಾಹಿತಿಯನ್ನು ಪಡೆದಿರಬೇಕಾಗುತ್ತದೆ ಎಂದು ತಿಳಿಸುತ್ತಾ, ಸಮಾಜಶಾಸ್ತ್ರ ಅಧ್ಯಯನ ವಿಭಾಗಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿದ್ದ ವಿದ್ಯಾರ್ಥಿಗಳು 25 ಮಂದಿ ಆದರೆ ಒಟ್ಟಾರೆ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು 65 ಮಂದಿ. ಆದರೆ ಎಲ್ಲಾ ವಿದ್ಯಾರ್ಥಿಗಳಿಗೂ ಹೇಗೆ ಹಾಜರಾತಿಯನ್ನು ನೀಡುತ್ತಿದ್ದಾರೆ ಎಂಬುದು ತಿಳಿಯುತ್ತಿಲ್ಲ. ಹಾಗೆಯೇ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರುಗಳೇ ಹೆಚ್ಚಿದ್ದಾರೆ ಎಂದು ತಿಳಿಸಿದರು.

ಮುಂದುವರೆದು, ಯಾವುದೇ ವಿದ್ಯಾರ್ಥಿಗಳ ವಿರುದ್ಧವಾಗಲಿ, ಶಿಷ್ಯವೇತನ ಪಡೆಯುತ್ತಿರುವ ವಿದ್ಯಾರ್ಥಿಗಳ ವಿರೋಧಿ ಅಲ್ಲ, ಆದರೆ ಎಲ್ಲಾ ವಿದ್ಯಾರ್ಥಿಗಳಲ್ಲೂ ಕಲಿಕೆ ಬಗ್ಗೆ ಆಸಕ್ತಿ, ತಮ್ಮನ್ನು ತಾವು ತೊಡಗಿಸಿಕೊಂಡಾಗಲೇ ಅವರಿಗೆ ಮುಂದಿನ ಭವಿಷ್ಯವು ಚೆನ್ನಾಗಿರುತ್ತದೆ ಎಂಬುದಷ್ಟೆ ನನ್ನ ಆಶಯವೆಂದು ತಿಳಿಸಿದರು. ಕೆಲವೊಂದು ಅಧ್ಯಯನ ವಿಭಾಗಗಳಿಗೆ ಭೇಟಿ ನೀಡಿದಾಗ ಅಧ್ಯಾಪಕರುಗಳಿದ್ದರೂ, ವಿದ್ಯಾರ್ಥಿಗಳೇ ಇರುವುದಿಲ್ಲ. ಹಾಗೂ ಎಲ್ಲಾ ವಿಭಾಗಗಳಿಗೂ calendar of events ಅನ್ನು ನೀಡಲಾಗಿದ್ದು, calendar of eventsನ ಪ್ರಕಾರ ತರಗತಿಗಳು ನಡೆಯುತ್ತವೆ ಎಂದು ತಿಳಿಸುತ್ತಾ, ಎಐಸಿಟಿಯು ಅನುಮೋದನೆಯನ್ನು ನೀಡಿದ್ದರೂ ಸಹ ಎಂ.ಎಡ್‌.ಗೆ ಕಾರ್ಯಭಾರವಿಲ್ಲದಿರುವುದರಿಂದ ಕಾರ್ಯಭಾರವನ್ನು ನೀಡಲಾಗುವುದಿಲ್ಲವೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಸುಮಾರು ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರಿಗೆ ಮಾನವೀಯತೆಯ ಆಧಾರದ ಮೇಲೆ ಕಾರ್ಯಭಾರವನ್ನು ನೀಡಬೇಕಾಗುತ್ತದೆ ಎಂದು ತಿಳಿಸಿದರು, ಸದರಿ ವಿಷಯಕ್ಕೆ ಸಿಂಡಿಕೇಟ್ ಸದಸ್ಯರುಗಳು ದನಿಗೂಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಶಿಕ್ಷಣ ಅಧ್ಯಯನ ವಿಭಾಗದಲ್ಲಿ ಕಾರ್ಯಭಾರವಿಲ್ಲದಿರು ವುದರಿಂದ ನೀಡಲು ಸಾಧ್ಯವಿಲ್ಲ. ಪ್ರಸ್ತುತ ಸದರಿ ವಿಭಾಗದವರಿಗೆ ಹೆಚ್ಚಿನ ಕಾರ್ಯಭಾರವನ್ನು ನೀಡಿದರೆ ಬೇರೆ ವಿಭಾಗದವರು ಸಹ ನಮಗೂ ಹೆಚ್ಚಿನ ಕಾರ್ಯಭಾರವನ್ನು ನೀಡುವಂತೆ ಕೇಳುತ್ತಾರೆ. ಆದ್ದರಿಂದ ನೀಡಲು ಸಾಧ್ಯವಿಲ್ಲವೆಂದು ತಿಳಿಸಿದರು. ಎನ್‌ಸಿಟಿ ಹೇಳಿದ್ದರೂ ಸಹ, ಯುಜಿಸಿ ಮಾನ್ಯತೆ ನೀಡುವುದಿಲ್ಲವೆಂದು ತಿಳಿಸಿದರು. ಜೊತೆಗೆ ಡಾ. ಪ್ರವೀಣ್ ರವರು ಶಿಕ್ಷಣ ಅಧ್ಯಯನ ವಿಭಾಗಕ್ಕೆ ವಾಪಸ್ಸಾಗಿರುವುದರಿಂದ ಹೆಚ್ಚಿನ ಕಾರ್ಯಭಾರವನ್ನು ನೀಡಲು ಸಾಧ್ಯವಿಲ್ಲವೆಂದು ತಿಳಿಸುತ್ತಾ,

ಸೆಮಿನಾರ್‌ಗಾಗಲಿ, Dissertationಗಾಗಲಿ ಕಾರ್ಯಭಾರವನ್ನು ಹಂಚಿಕೆ ಮಾಡಲಾಗುವುದಿಲ್ಲವೆಂದು ತಿಳಿಸಿದರು.

12. ಶ್ರೀ ನಾಗರಾಜು ಸಿ. ರವರು ಮಾತನಾಡಿ, 1961ರಲ್ಲಿ ಶಿಕ್ಷಣ ಅಧ್ಯಯನ ವಿಭಾಗವು ಸ್ಥಾಪಿಸಲ್ಪಟ್ಟಿದ್ದು, ಬೇರೆ ಕಾಲೇಜಿಗಿಂತ ವಿಶ್ವವಿದ್ಯಾನಿಲಯದಲ್ಲಿ ಎಂ.ಎಡ್ ವಿಷಯವು ಹೆಚ್ಚಿನ ಮಾನ್ಯತೆ ಪಡೆದಿದೆ, ಆದರೆ ತಾವು Dissertationಗೆ ಕಾರ್ಯಭಾರವನ್ನು ನೀಡುತ್ತಿಲ್ಲವೆಂದು ತಿಳಿಸುತ್ತಾ, ಕೆಲವು ಅಧ್ಯಯನ ವಿಭಾಗದಲ್ಲಿ ಮಾಹಿತಿಯನ್ನು ಕೇಳಲು ಸಿಂಡಿಕೇಟ್ ಸದಸ್ಯರುಗಳಾದ ನಾವುಗಳು ಹೋದಂತಹ ಸಂದರ್ಭದಲ್ಲಿ ಅಧ್ಯಕ್ಷರುಗಳು ನಮಗೆ ಸಿಗುವುದಿಲ್ಲವೆಂದು ತಿಳಿಸಿದರು. ಭೌತಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರಾದ ಪ್ರೊ. ಶ್ರೀಧರ್ ಅವರು ಮಾಹಿತಿಯನ್ನು ನೀಡುತ್ತಿಲ್ಲವೆಂದು ತಿಳಿಸುತ್ತಾ, ಈ ಹಿಂದೆ ಎಂ.ಎಡ್. ವಿಷಯವಾಗಿ ಕಾರ್ಯಭಾರವನ್ನು ನೀಡಿದ್ದಾರಲ್ಲವೇ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಕುಲಸಚಿವರು, ಕುಲಸಚಿವ (ಪರೀಕ್ಷಾಂಗ) ಹಾಗೂ ಇತರೆ ಅಧಿಕಾರಿಗಳಿಂದ ವಿಷಯಗಳಿಗನುಗುಣವಾಗಿ ಕಾರ್ಯಭಾರವನ್ನು ಹಂಚಿಕೆ ಮಾಡುವ ವಿವರವನ್ನು ಪಡೆಯಬಹುದು ಎಂದು ತಿಳಿಸುತ್ತಾ, ಪ್ರೊ. ಶ್ರೀಧರ್ ಅವರು ನನಗಿಂತ ಹಿರಿಯ ಪ್ರಾಧ್ಯಾಪಕರು, ಹಾಗೂ ವಿಷಯ ತಜ್ಞರು, ಶೈಕ್ಷಣಿಕವಾಗಿ ಹೆಚ್ಚಿನ ಕೆಲಸವನ್ನು ಮಾಡಿದ್ದು, ವಿಶ್ವವಿದ್ಯಾನಿಲಯಕ್ಕೆ ತಮ್ಮದೇ ಆದ ಕೊಡುಗೆಯನ್ನು ಸಹ ನೀಡಿರುತ್ತಾರೆ. ಸಮಿತಿಯಲ್ಲಿ ನಿರ್ಧರಿಸಿರುವಂತೆ ಕಾರ್ಯಭಾರವನ್ನು ವಿಶ್ವವಿದ್ಯಾನಿಲಯಕ್ಕೆ ಅವರು ನೀಡಿರುವುದರಿಂದ ಆ ಮಾಹಿತಿಯನ್ನು ಅವರೇ ಖುದ್ದಾಗಿ ನೀಡುವುದಿಲ್ಲವೆಂಬ ಅಂಶವನ್ನು ಸಭೆಗೆ ತರುತ್ತಾ, ವಿಶ್ವವಿದ್ಯಾನಿಲಯದ ಅಧಿನಿಯಮ, ನಿಯಮಾವಳಿಗಳ ಪ್ರಕಾರ ಕೆಲಸ ನಿರ್ವಹಿಸಲಾಗುತ್ತದೆ. ನಾನು ಎನ್‌ಸಿಟಿ ವಿರುದ್ಧವೂ ಇಲ್ಲ, ಕಾರ್ಯಭಾರವನ್ನೂ ನೀಡಬಾರದೆಂಬ ಆಶಯವೂ ಇಲ್ಲವೆಂದು ತಿಳಿಸುತ್ತಾ, ಈ ಹಿಂದೆ ಎಂ.ಎಡ್. ವಿಷಯವಾಗಿ ಕಾರ್ಯಭಾರವನ್ನು ತಪ್ಪಾಗಿ ಹಂಚಿಕೆ ಮಾಡಿರುವುದನ್ನು ಮುಂದುವರೆಸಲು ಸಾಧ್ಯವಿಲ್ಲವೆಂದು ತಿಳಿಸುತ್ತಾ, ಜೊತೆಗೆ ಶಿಕ್ಷಣ ಅಧ್ಯಯನ ವಿಭಾಗದಲ್ಲಿ ಪ್ರವೇಶಾತಿಯೂ ಅತಿ ಕಡಿಮೆ ಇದ್ದು, ಅದರಲ್ಲೂ ಕೆಲವು ವಿದ್ಯಾರ್ಥಿಗಳೂ ತರಗತಿಗೆ ಹಾಜರಾಗುತ್ತಿಲ್ಲವೆಂದು ತಿಳಿಸುತ್ತಾ, ಪ್ರಸ್ತುತ 4 ಗಂಟೆಗಳ ಕಾರ್ಯಭಾರವನ್ನು ಮಾನವೀಯತೆಯ ದೃಷ್ಟಿಯಿಂದ ನೀಡಿರುವುದಾಗಿ ತಿಳಿಸಿದರು. ಸದರಿ ವಿಷಯವಾಗಿ ದೀರ್ಘ ಚರ್ಚೆ ನಡೆಯಿತು.

13. ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಯಾವ್ಯಾವ ಅಧ್ಯಯನ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ ಕಡಿಮೆಯಿದೆಯೋ ಅಂತಹ ವಿಭಾಗಗಳ ವಿದ್ಯಾರ್ಥಿಗಳನ್ನು ಒಂದುಗೂಡಿಸಿ, ಒಂದೇ ಕಡೆ ಪರೀಕ್ಷೆ ಬರೆಯುವಂತೆ ಕ್ರಮಕೈಗೊಂಡಿರುವುದರಿಂದ ಸದರಿ ವಿಷಯವು ಬೆಳಕಿಗೆ ಬಂದಿದೆ ಎಂದು ತಿಳಿಸಿದರು.

14. ಶ್ರೀ ಮಹದೇಶುರವರು ಮಾತನಾಡಿ, ಮಾನಸಗಂಗೋತ್ರಿ ಆವರಣದಲ್ಲಿ ಪ್ಲಾಸ್ಟಿಕ್ ಮುಕ್ತ ವಲಯವನ್ನಾಗಿ ಮಾಡುವ ಉದ್ದೇಶದ ಬಗ್ಗೆ ಇಲ್ಲಿಯವರೆವಿಗೂ ಕ್ರಮಕೈಗೊಂಡಿರುವುದಿಲ್ಲ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರು ಮಾತನಾಡಿ, ಮಾನಸಗಂಗೋತ್ರಿ ಆವರಣವನ್ನು ಪ್ಲಾಸ್ಟಿಕ್ ಮುಕ್ತ ವಲಯವನ್ನಾಗಿ ಮಾಡಲು ಸೂಕ್ತ ಕ್ರಮವನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

15. ಮಾನ್ಯ ಕುಲಪತಿಗಳು ಮಾತನಾಡಿ, ಮಾನಸಗಂಗೋತ್ರಿ ಆವರಣದ ವಿಭಾಗಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವಂತಹ ಸಂದರ್ಭದಲ್ಲಿ ಡಿಜೆ ಶಬ್ದಗಳು ಕಿರಿಕಿರಿ ಉಂಟು ಮಾಡುತ್ತಿರುವುದು

ಗಮನಿಸಿರುತ್ತೇವೆ, ಈ ಸಂಬಂಧ ಕುಲಸಚಿವರಿಗೆ ನಿರ್ದೇಶನ ನೀಡಲಾಗಿದ್ದು, ಯಾವುದೇ ವಿಭಾಗಗಳ ಕಾರ್ಯಕ್ರಮಗಳನ್ನು ವಿಭಾಗದಲ್ಲಿಯೇ ನಡೆಸತಕ್ಕದ್ದು ಹಾಗೂ ಡಿಜೆ ಶಬ್ದಗಳು ಬಳಸುವಂತಿಲ್ಲ ಎಂದು ತಿಳಿಸಲಾಗಿದೆ.

ಕುಲಸಚಿವರು ಮಾತನಾಡಿ, ವಿಭಾಗಗಳ ಮುಖ್ಯಸ್ಥರನ್ನು ಸಭೆಗೆ ಕರೆದು ವಿಭಾಗಗಳಲ್ಲಿ ಡಿಜೆ ಶಬ್ದಗಳು ಉಂಟು ಮಾಡುವ ಕಿರಿಕಿರಿ ಕುರಿತು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ತಿಳಿಸಲಾಗಿದೆ.

16. ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಪ್ರತಿಭಟನೆ ಮಾಡಲು ಪ್ರಜಾಪ್ರಭುತ್ವದಲ್ಲಿ ಹಕ್ಕಿದೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ಮಾಡುವ ಸಂದರ್ಭದಲ್ಲಿ ಕುಲಸಚಿವರ ಕಛೇರಿಯಾಗಲಿ, ಕುಲಸಚಿವ(ಪರೀಕ್ಷಾಂಗ)ರವರ ಕಛೇರಿಯ ಮುಂದಾಗಲಿ ಪ್ರತಿಭಟನೆ ಮಾಡುತ್ತೇವೆಂದು ಅಧಿಕಾರಿಗಳಿಗೆ ಗೌರವ ಕೊಡದೆ, ಅಲ್ಲಲ್ಲಿಯೇ ಕುಳಿತುಕೊಳ್ಳುವುದು, ಹಾಗೂ ಮಲಗುವುದು ವಿದ್ಯಾರ್ಥಿಗಳ ಸರಿಯಾದ ಕ್ರಮವಲ್ಲ. ಆದ್ದರಿಂದ ಸದರಿ ವಿಷಯವಾಗಿ ಸುತ್ತೋಲೆಯನ್ನು ಹೊರಡಿಸಬೇಕೆಂದು ಸುತ್ತೋಲೆಯನ್ನು ಹೊರಡಿಸಿದ ನಂತರ ಸುತ್ತೋಲೆಗೆ ತಕ್ಕಂತೆ ಅಗತ್ಯ ಕ್ರಮವಹಿಸಬೇಕೆಂದು ತಿಳಿಸಿದರು. ಪ್ರತಿಭಟನೆಯನ್ನು ಮಾಡುವ ಸಂದರ್ಭದಲ್ಲಿ ಅಂತಹವರ ವಿರುದ್ಧ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ವಿಭಾಗದ ಮುಖ್ಯಸ್ಥರು ಹಾಗೂ ಪೋಲೀಸರೊಂದಿಗೆ ಸಭೆ ನಡೆಸಿ ಈ ಬಗ್ಗೆ ಕ್ರಮವಹಿಸುವುದಾಗಿ ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಪ್ರತಿಭಟನೆಗಳಲ್ಲಿ ಭಾಗವಹಿಸುವವರಿಗೆ ಊಟ ತಿಂಡಿಗಳ ವ್ಯವಸ್ಥೆಗಳನ್ನು ನೀಡುತ್ತಿರುವವರ ವಿರುದ್ಧವೂ ಸಹ ಕ್ರಮವಾಗಬೇಕು ಎಂದು ತಿಳಿಸಿದರು.

ಅಂತಿಮವಾಗಿ, ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಗೌರವಾನ್ವಿತ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ**

**ಕುಲಪತಿಗಳು ಹಾಗೂ ಅಧ್ಯಕ್ಷರು**